ಸಂಪಾದಕರು: ರವಿಕುಮಾರ್ ಸಿ.ಹೆಚ್.

RNI: KARKAN/2021/80805

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SURYA PRAGATHI Kannada daily

SP NEWS ಡಿಜಿಟಲ್ ನ್ಯೂಸ್ ಕಹಾನಿ

ಪ್ರತಿ ಸುದ್ದಿಯ ಧ್ವನಿ

suryapragathidailynews@gmail.com 9901010109 L2/RNP-1285/TMR/2025-27

Volume: 05 ಸಂಪುಟ: 05 | Issue:232 ಸಂಚಿಕೆ: 232 | Date:08-10-2026 Thursday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

ಸಣ್ ಸುದ್ದಿ

TP/ZP ಚುನಾವಣೆಗೆ ಅಂತಿಮ ಮೀಸಲಾತಿ ಪಟ್ಟಿ ಬಿಡುಗಡೆ

ಸೂರ್ಯಪ್ರಗತಿನ್ಯೂಸ್.ಕಾಂ



ಬೆಂಗಳೂರು: ಕರ್ನಾಟಕದ ಗ್ರಾಮೀಣ ಭಾಗದ ರಾಜೀಕಯ ಚಟುವಟಿಗೆ ಬಿರುಸು ಸಿಕ್ಕಿದೆ. ಚುನಾವಣೆ ಆಗದೆ ಮುಹೂರ್ತಕ್ಕಾಗಿ ಕಾಯುತ್ತಿದ್ದ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಚುನಾವಣೆಗೆ ಸಂಬಂಧಿಸಿದ ಅಂತಿಮ ಮೀಸಲಾತಿ ಪಟ್ಟಿಯನ್ನು ರಾಜ್ಯ ಸರ್ಕಾರ ಹೊರಡಿಸಿದೆ.

ಕ್ಷೇತ್ರವಾರು ವರ್ಗವಾರು ಅಂತಿಮ ಮೀಸಲಾತಿ ನಿಗದಿಪಡಿಸಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರಾಜ್ಯಪತ್ರ ಅಧಿಸೂಚನೆ ನೀಡಿದೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ನಿಯಮಾವಳಿಗಳು ಹಾಗೂ ಪ್ರಕರಣ 162ರ ಅಡಿಯಲ್ಲಿ ಈ ಹಿಂದೆ ಹೊರಡಿಸಲಾಗಿದ್ದ ಎಲ್ಲಾ ಹಳೆಯ ಅಧಿಸೂಚನೆಗಳನ್ನು ರದ್ದುಗೊಳಿಸಿ ನೀತನ ಪಟ್ಟಿಯನ್ನು ಈಗ ಪ್ರಕಟಿಸಿದೆ. ಒಟ್ಟು 1,129 ಸ್ಥಾನಗಳಲ್ಲಿ ಮಹಿಳೆಯರಿಗೆ 571 ಸ್ಥಾನ ಮೀಸಲಿಟ್ಟು ಸಕಾರ ಸಾಮಾಜಿಕ ನ್ಯಾಯ ಮೆರೆದಿದೆ. ಮಹಿಳೆಯರಿಗೆ ಅರ್ಧಕ್ಕಿಂತ ಹೆಚ್ಚು ಸ್ಥಾನಗಳನ್ನು ಈ ಹೊಸ ಪಟ್ಟಿಯಲ್ಲಿ ಮೀಸಲಿರಿಸಿದೆ.

ಅನುಸೂಚಿತ ಜಾತಿ (SC): 225 ಸ್ಥಾನ (121 ಸ್ಥಾನ ಮಹಿಳೆಯರಿಗೆ)
ಅನುಸೂಚಿತ ಪಂಗಡ (ST): 102 ಸ್ಥಾನ (59 ಸ್ಥಾನ ಮಹಿಳೆಯರಿಗೆ)
ಹಿಂದುಳಿದ ವರ್ಗ 'ಅ' (BC-A): 183 ಸ್ಥಾನ (98 ಸ್ಥಾನ ಮಹಿಳೆಯರಿಗೆ)
ಹಿಂದುಳಿದ ವರ್ಗ 'ಬ' (BC-B): 43 ಸ್ಥಾನ (25 ಸ್ಥಾನ ಮಹಿಳೆಯರಿಗೆ)
ಸಾಮಾನ್ಯ ವರ್ಗ (General): 576 ಸ್ಥಾನ (268 ಸ್ಥಾನ ಮಹಿಳೆಯರಿಗೆ)

ಜಿ.ಪಂ., ತಾಪಂ.ಗಳಿಗೆ ಈಗ ಅಂತಿಮ ಮೀಸಲಾತಿ ಪ್ರಕಟವಾಗಿದ್ದು, ಸಧ್ಯದಲ್ಲೇ ರಾಜ್ಯ ಚುನಾವಣಾ ಆಯೋಗ ಚುನಾವಣಾ ವೇಳಾಪಟ್ಟಿ ಘೋಷಿಸುವ ಸೂಚನೆ ಸಿಕ್ಕಿದೆ. ಗ್ರಾಮೀಣ ಭಾಗದ ರಾಜಕೀಯ ಅಖಾಡ ಬಿರುಸಿನಿಂದ ಆರುಭವಾಗಿದ್ದು, ಹೊಸ ಚೈತನ್ಯದೊಂದಿಗೆ ರಾಜಕೀಯ ರುಗು ಪಡೆಯುತ್ತಿದೆ.

ಮಳೆ ಇಲ್ಲದೇ ಬೆಳೆ ಕ್ಷೀಣ ಗಗನಕ್ಕೇರಿದ ತರಕಾರಿ ಬೆಲೆ

ರಾಜ್ಯದ ವಿವಿಧೆಡೆ ಕಳೆದ ಕೆಲವು ದಿನಗಳಿಂದ ಮಳೆಯಾಗುತ್ತಿದ್ದು, ಬೆಳೆ ಮೇಲೆ ಪರಿಣಾಮ ಬೀರಿದ್ದು ಬೆಲೆ ಏರಿಕೆಗೆ ಕಾರಣವಾಗಿದೆ.ಇನ್ನೂ ಕೆಲವೆಡೆ ಬರದಿಂದ ಸಹ ನೀರಿನ ಕೊರತೆ ಉಂಟಾಗಿ ಉತ್ಪಾದನೆ ಕುಂಠಿತವಾಗಿ ಬೆಲೆ ಹೆಚ್ಚಳವಾಗಿದೆ.25 ದಿನಗಳ ಹಿಂದೆ ಇದ್ದ ಟೊಮ್ಯಾಟೊ ದರ ದಿಢೀರನೇ ಕೆಜಿಗೆ 50 ರೂ.ಗೆ ಏರಿಕೆಯಾಗಿದ್ದರೆ, ಬೀನ್ಸ್ ಕೂಡಾ 70 ರೂ.ಗಳಿಂದ 100 ರೂ.ವರೆಗೂ ಏರಿಕೆಯಾಗಿದೆ. ಸೌತೆಕಾಯಿ 40–45 ರೂ., ಬೆಂಡೇಕಾಯಿ 50 ರೂ., ತೊಂಡೇಕಾಯಿ–40 ರೂ., ಮೈಸೂರು ಬದನೆಕಾಯಿ 50 ರೂ., ಕ್ಯಾಪ್ಸಿಕಂ 60 ರೂ., ಮೂಲಂಗಿ 50 ರೂ., ನವಿಲುಕೋಸು 50 ರೂ., ಬೀಟ್‌ರೋಟ್– 50 ರೂ., ಹೀರೇಕಾಯಿ 50 ರೂ.ಗಳಿಗೆ ಮಾರಾಟವಾಗುತ್ತಿದೆ. ಅದೇ ರೀತಿ ಮೆಂತ್ಯೆ ಸೊಪ್ಪು ಕಟ್ಟಿಗೆ 80 ರೂ., ದಂಟು 50 ರೂ., ಸಬ್ಬಕ್ಕಿ 60 ರೂ., ಪಾಲಾಕ್ 70 ರೂ., ನಾಟಿ ಕೊತ್ತಂಬರಿ ಸೊಪ್ಪು 100 ರೂ.ಗಳಿಗೆ ಏರಿಕೆಯಾಗಿದೆ.

ಕಣ್ಣೀರು ತರಿಸುತ್ತಿದೆ ಈರುಳ್ಳಿ ಬೆಲೆ :

ಕಳೆದ ಕೆಲವು ದಿನದಿಂದ ದಿನಕ್ಕೆ ಈರುಳ್ಳಿ ಬೆಲೆ ಏರುತ್ತಲೇ ಇದೆ. ಗುಣಮಟ್ಟದ ಈರುಳ್ಳಿ ಕೆಜಿಗೆ 70 ರೂ.ಗಳಿಂದ 80 ರೂ.ಗೆ ಮಾರಾಟವಾಗುತ್ತಿದೆ. ಹೆಚ್ಚಾಗಿ ಈರುಳ್ಳಿ ಬೆಳೆಯುವ ಪ್ರದೇಶಗಳಾದ ಬಳ್ಳಾರಿ, ರಾಯಚೂರು, ಬಿಜಾಪುರ, ದಾವಣಗೆರೆ, ಹುಬ್ಬಳ್ಳಿ, ಧಾರವಾಡದಲ್ಲಿ ಮಳೆ ಕೊರತೆಯಿಂದಾಗಿ ನಿರೀಕ್ಷಿತ ಪ್ರಮಾಣದಲ್ಲಿ ಮಾರುಕಟ್ಟೆಗೆ ಮಾಲು ಬಾರದಿರುವುದರಿಂದ ಬೆಲೆ ಹೆಚ್ಚಳವಾಗಿದೆ. ಒಟ್ಟಾರೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಮಧ್ಯಮ ವರ್ಗದವರ ಜೀವನ ದಿನದಿಂದ ದಿನಕ್ಕೆ ದುಪ್ಪಟ್ಟಾಗುತ್ತಿದೆ.

ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್



ಸೂರ್ಯಪ್ರಗತಿನ್ಯೂಸ್.ಕಾಂ

ಬೆಂಗಳೂರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ದಿನಪತ್ರಿಕೆಗಳು/ಮಾಧ್ಯಮ ಸಂಸ್ಥೆಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರಿಗೆ ತಿದ್ದುಪಡಿ ಮಾಡಲಾದ ಹೊಸ ಮಾರ್ಗಸೂಚಿಯನ್ವಯ ಉಚಿತ ಬಸ್ ಪಾಸ್ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಪತ್ರಕರ್ತರು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಲ್ಲಿ "ಪೂರ್ಣಾವಧಿ/ಅರೆಕಾಲಿಕ ವರದಿಗಾರರಾಗಿ ನೇಮಕವಾಗಿದ್ದಲ್ಲಿ ಆಯಾ ಮಾಧ್ಯಮ ಸಂಸ್ಥೆಯ ಸಂಪಾದಕರ / ಸ್ಥಾನಿಕ ಸಂಪಾದಕರ / ಮುಖ್ಯಸ್ಥರ ಶಿಫಾರಸ್ಸು ಪತ್ರ ಮತ್ತು ಸೇವಾ ಪ್ರಮಾಣ ಪತ್ರವನ್ನು ಲಗತ್ತಿಸಿ "ಸೇವಾ ಸಿಂಧು" ಪೋರ್ಟಲ್ https://sevasindhu.karnataka.gov.in ಮೂಲಕ ಸಮೀಪದ ಗ್ರಾಮ–1 ಕೇಂದ್ರದಲ್ಲಿ ಆನ್ ಲೈನ್ ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು.ಈ ಹಿಂದೆ ಇದ್ದ ಮಾರ್ಗಸೂಚಿಯಲ್ಲಿ 11 ತಿಂಗಳ ವೇತನ ಪತ್ರ ಸಲ್ಲಿಸಬೇಕು ಎಂಬ ಷರತ್ತನ್ನು ಸಡಿಲಿಸಿ. ಆಯಾ ಮಾಧ್ಯಮ ಸಂಸ್ಥೆಯ ಸಪಾದಕರ, ಸ್ಥಾನಿಕ ಸಂಪಾದಕರ/ಮುಖ್ಯಸ್ಥರ ಶಿಫಾರಸ್ಸು ಪತ್ರವನ್ನು ಪರಿಗಣಿಸಲು ಅವಕಾಶ ಕಲ್ಪಿಸಲಾಗಿದೆ. ಆನ್ ಲೈನ್ ನಲ್ಲಿ ಸಲ್ಲಿಸಲಾದ ಅರ್ಜಿ ಮತ್ತು ಲಗತ್ತಿಸಲಾಗಿರುವ ದಾಖಲೆಗಳ ಒಂದು ಪ್ರತಿಯನ್ನು ಆಯಾ ಜಿಲ್ಲೆಯ ವಾರ್ತಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು. ಸ್ವೀಕೃತ ಅರ್ಜಿಗಳನ್ನು ಆಯ್ಕೆ ಸಮಿತಿಯ ಸಭೆಯಲ್ಲಿ ಪರಿಶೀಲಿಸಿ ಬಸ್ ಪಾಸ್ ಮಂಜೂರು ಮಾಡಲಾಗುತ್ತದೆ. ತಾಲ್ಲೂಕು ಮಟ್ಟದ ಪತ್ರಕರ್ತರಿಗೆ ಸುದ್ದಿ ಸಂಗ್ರಹಿಸಲು ಅನುಕೂಲ ಕಲ್ಪಿಸಲು ಸರ್ಕಾರವು ವಾರ್ತಾ ಇಲಾಖೆಯ ಮೂಲಕ ಉಚಿತ ಬಸ್ ಪಾಸ್ ಗಳನ್ನು ನೀಡುತ್ತಿದೆ. ರಾಜ್ಯದ ಎಲ್ಲಾ ತಾಲ್ಲೂಕುಗಳ ಅರ್ಹ ಪತ್ರಕರ್ತರು ಕೂಡಲೇ "ಸೇವಾಸಿಂಧು" ಪೋರ್ಟಲ್ ಮೂಲಕ ಗ್ರಾಮ–1 ಕೇಂದ್ರದ ಮೂಲಕ 2026 ರ ಅಕ್ಟೋಬರ್ 31 ರೊಳಗೆ ಅರ್ಜಿಗಳನ್ನು ಸಲ್ಲಿಸಬೇಕು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಎಂ.ಎನ್.ಅನುಚೇತ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಕ್ರೋಫೈನಾನ್ಸ್ ಸಂಸ್ಥೆಗಳು ರೈತರಿಗೆ ಕಿರುಕುಳ ನೀಡಿದರೆ ಎಫ್‌ಐಆರ್

ಯಾರೂ ಗುಳೆ ಹೋಗಬೇಡಿ, ಊರಲ್ಲೇ ಕೆಲಸ ಕೊಡುತ್ತೇವೆ: ಡಿಸಿಎಂ ಪರಮೇಶ್ವರ ಭರವಸೆ

ಸೂರ್ಯಪ್ರಗತಿನ್ಯೂಸ್.ಕಾಂ

: ರಾಜ್ಯದಲ್ಲಿ ಕಳೆದ 75 ವರ್ಷಗಳಲ್ಲಿ ಕಾಣದಷ್ಟು ಭೀಕರ ಬರ ಪರಿಸ್ಥಿತಿ ಎದುರಾಗಿದ್ದು, ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ರೈತರು ಎದುರಿಸುತ್ತಿರುವ ನೈಜ ಪರಿಸ್ಥಿತಿಯನ್ನು ಕಣ್ಣಾರೆ ಕಂಡು, ಅವರ ಸಮಸ್ಯೆಗಳನ್ನು ನೇರವಾಗಿ ಆಲಿಸಿ ಸರ್ಕಾರದಿಂದ ಅಗತ್ಯ ನೆರವು ಒದಗಿಸುವ ಉದ್ದೇಶದಿಂದ ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡುತ್ತಿರುವುದಾಗಿ ಉಪಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರಾದ ಡಾ. ಜಿ. ಪರಮೇಶ್ವರ ಅವರು ಹೇಳಿದರು.



ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ಬಂಡ್ರಿ ಗ್ರಾಮದಲ್ಲಿ ಮೆಕ್ಕೆಜೋಳ ಬೆಳೆ ಜಮೀನಿಗೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ರೈತರೊಂದಿಗೆ ಅವರು ಸಂವಾದ ನಡೆಸಿ ಮಾತನಾಡಿದರು.

ರೈತ ಬಾಂಧವರಿಗೆ ನಮಸ್ಕರಿಸಿ ಮಾತು ಆರಂಭಿಸಿದ ಡಾ. ಜಿ. ಪರಮೇಶ್ವರ ಅವರು, ರಾಜ್ಯದಾದ್ಯಂತ ಅತ್ಯಂತ ಗಂಭೀರವಾದ ಬರ ಪರಿಸ್ಥಿತಿ ನಿರ್ಮಾಣವಾಗಿದೆ. ಇಂದಿನ ಪೀಳಿಗೆಯ ಬಹುತೇಕ ಜನ ಇಂತಹ ಬರವನ್ನು ತಮ್ಮ ಬದುಕಿನಲ್ಲಿ ನೋಡಿರಲಿಕ್ಕಿಲ್ಲ. ರಾಜ್ಯದ ಯಾವ ಭಾಗವೂ ಸಂಪೂರ್ಣವಾಗಿ ಬರದ ಪರಿಣಾಮದಿಂದ ಹೊರತಾಗಿಲ್ಲ. ಸುಮಾರು 240 ತಾಲೂಕುಗಳಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಬರದ ಸಂಕಷ್ಟ ಎದುರಾಗುತ್ತಿದೆ. ರೈತರು ಅತ್ಯಂತ ಕಷ್ಟದಲ್ಲಿದ್ದು, ವಿವಿಧ ಭಾಗಗಳಲ್ಲಿ ಬೆಳೆಯುವ ಜೋಳ, ರಾಗಿ, ಸೂರ್ಯಕಾಂತಿ, ತೊಗರಿ ಸೇರಿದಂತೆ ಬಹುತೇಕ ಬೆಳೆಗಳು ಮಳೆ ಕೊರತೆಯಿಂದ ನಾಶವಾಗಿವೆ ಎಂದು ಹೇಳಿದರು.

ಮೈಸೂರು ಭಾಗದ ತಾಲೂಕುಗಳಿಗೆ ಭೇಟಿ ನೀಡಿದಾಗಲೂ ಇದೇ ರೀತಿಯ ಪರಿಸ್ಥಿತಿ ಕಂಡುಬಂದಿತ್ತು. ಬಳ್ಳಾರಿ ಭಾಗದ ಹಲಕುಂದಿ ಗ್ರಾಮದಲ್ಲಿ ರೈತರು ಬಿತ್ತಿದ್ದ ತೊಗರಿ ಸಂಪೂರ್ಣ ಹಾನಿಗೀಡಾಗಿರುವುದನ್ನು ಪರಿಶೀಲಿಸಲಾಗಿದೆ. ತೊಗರಿ ಹಾಳಾದ ಬಳಿಕ ಸ್ವಲ್ಪ ಮಳೆ ಬಂದಾಗ ಮತ್ತೆ ಜೋಳ ಬಿತ್ತಿದ ರೈತರಿದ್ದಾರೆ. ಆದರೆ ಜೋಳ ಎರಡು ಎಲೆ ಬರುವಷ್ಟರಲ್ಲಿ ಮತ್ತೆ ಒಣಗಿಹೋಗಿದೆ ಎಂದು ವಿವರಿಸಿದರು.

ಬಂಡ್ರಿ ಗ್ರಾಮದಲ್ಲಿ ಮೆಕ್ಕೆಜೋಳದ ಜಮೀನನ್ನು ಪರಿಶೀಲಿಸಿದಾಗ ಬೆಳೆ ಮಳೆ ಕೊರತೆಯಿಂದ ಒಣಗಿರುವುದರ ಜೊತೆಗೆ ಕೀಟಬಾಧೆಯೂ ಉಂಟಾಗಿರುವುದು ಕಂಡುಬಂದಿದೆ. ಬೆಳೆ ರೈತನಿಗೆ ಇಳುವರಿ ನೀಡದ ಸ್ಥಿತಿಯಷ್ಟೇ ಅಲ್ಲ, ದನಗಳಿಗೆ ಮೇವಾಗಿಯೂ ಬಳಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಡಿಸಿಎಂ ಪರಮೇಶ್ವರ ಅವರು ವಿಷಾದಿಸಿದರು.



ರಾಜ್ಯದ ವಿವಿಧ ಭಾಗಗಳಲ್ಲಿನ ಬರ ಪರಿಸ್ಥಿತಿಯನ್ನು ನೇರವಾಗಿ ಪರಿಶೀಲಿಸಲಾಗುತ್ತಿದೆ. ಮುಖ್ಯಮಂತ್ರಿಗಳು ಒಂದು ಕಡೆ, ನಾನು ಮತ್ತೊಂದು ಕಡೆ, ಅಧಿಕಾರಿಗಳು ವಿವಿಧ ಭಾಗಗಳಲ್ಲಿ ಸಂಚರಿಸಿ ಪರಿಸ್ಥಿತಿಯನ್ನು ಪರಿಶೀಲಿಸುತ್ತಿದ್ದಾರೆ. ಸರ್ಕಾರ ಯಾವ ರೀತಿಯಲ್ಲಿ ರೈತರ ನೆರವಿಗೆ ಬರಬಹುದು ಎಂಬುದನ್ನು ನಿರ್ಧರಿಸಲು ನೈಜ ಪರಿಸ್ಥಿತಿಯನ್ನು ಕಣ್ಣಾರೆ ನೋಡಲಾಗುತ್ತಿದೆ ಎಂದು ಡಾ. ಪರಮೇಶ್ವರ ಹೇಳಿದರು.

ಏನಾದರೂ ಮಾಡಿ ರೈತನನ್ನು ಈ ಕಷ್ಟದಿಂದ ಪಾರು ಮಾಡಬೇಕು. ಅವರಿಗೆ ನೆರವು ಮತ್ತು ಸಹಾಯ ನೀಡಬೇಕು ಎಂಬ ಉದ್ದೇಶದಿಂದಲೇ ಸರ್ಕಾರ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.


ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕೃಷಿ ಇಲಾಖೆ ಅಧಿಕಾರಿಗಳು ಸೇರಿದಂತೆ ಜಿಲ್ಲಾಡಳಿತದ ಅಧಿಕಾರಿಗಳಿಗೆ ಪ್ರಸ್ತುತ ಬರ ನಿರ್ವಹಣೆಯನ್ನೇ ಮೊದಲ ಆದ್ಯತೆಯಾಗಿ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ. ಇತರೆ ಆಡಳಿತಾತ್ಮಕ ಕೆಲಸಗಳಿಗಿಂತ ಮೊದಲು ಬರದ ಸಮಸ್ಯೆಗಳ ಪರಿಹಾರಕ್ಕೆ ಗಮನಹರಿಸಬೇಕು ಎಂದು ಸೂಚಿಸಲಾಗಿದೆ ಎಂದರು.

ಸಿದ್ದರಾಮಯ್ಯ ಇಲ್ಲದೆ ಕರ್ನಾಟಕದಲ್ಲಿ ಕಾಂಗ್ರೆಸ್ ಝೀರೋ: ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ

ಕರ್ನಾಟಕದಲ್ಲಿ ಸಿದ್ದರಾಮಯ್ಯ ಇಲ್ಲದಿದ್ದರೆ ಕಾಂಗ್ರೆಸ್ ಶೂನ್ಯ ಎಂದಿರುವ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಅವರನ್ನು ಅಗೌರವದಿಂದ ಕಳಿಸಲು ಇವರು ಏನೆಲ್ಲಾ ಮಾಡಿದ್ದಾರೆ ಅಂತಾ ಚರ್ಚೆ ನಡೆಯುತ್ತಾ ಇದೆ. ಸ್ಟಿಂಗ್ ಆಪರೇಷನ್ ತೆಗೆದುಕೊಂಡು ಹೋಗಿ ಹೈಕಮಾಂಡ್‌ಗೆ ಕೊಟ್ಟು ರಾಜೀನಾಮೆ ಪಡೆದಿದ್ದಾರೆಂದು ಹೇಳಲಾಗ್ತಿದೆ. ಆ ಸ್ಟಿಂಗ್ ಆಪರೇಷನ್ ಹಿಂದೆ ಇರೋರು ಯಾರು ಚರ್ಚೆ ಆಗಬೇಕಲ್ವಾ ಎಂದು ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಪಕ್ಷ ಕರ್ನಾಟಕದಲ್ಲಿ ಉಳಿದಿದ್ರೆ ಸಿದ್ದರಾಮಯ್ಯ ಕಾರಣ. ಅವರು ಇಲ್ಲದೆ ಕಾಂಗ್ರೆಸ್ ಝೀರೋ. ಅಂತಹ ವ್ಯಕ್ತಿಯನ್ನು ಸಿಎಂ ಸ್ಥಾನದಿಂದ ತೆಗೆಯಲು ಏನು ಕಾರಣ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ. ಸಿದ್ದರಾಮಯ್ಯನವರು ದೇವರಾಜ ಅರಸು ದಾಖಲೆ ಮುರಿದವರು. ಒಂದು ವರ್ಗದಲ್ಲಿ ಸಿದ್ದರಾಮಯ್ಯ ಬಗ್ಗೆ ಒಳ್ಳೆಯ ಭಾವನೆ ಇದೆ. ಅವರ ಪ್ರತಿಮೆ ಕೂಡ ಅನಾವರಣ ಮಾಡಿದರು. ಅಂತಹ ವ್ಯಕ್ತಿಯನ್ನ ಸಂಪುಟ ವಿಸ್ತರಣೆಗೆಂದು ದೆಹಲಿಗೆ ಕರೆಸಿ, ಕ್ಷಣಮಾತ್ರದಲ್ಲಿ ರಾಜೀನಾಮೆ ಪಡೆದರು ಎಂದವರು ದೂರಿದ್ದಾರೆ.

ಸಿದ್ದರಾಮಯ್ಯರನ್ನು ಅಗೌರವದಿಂದ ಕಳಿಸಲು ಇವರು ಏನೆಲ್ಲ ಮಾಡಿದ್ದಾರೆ ಅಂತಾ ಚರ್ಚೆ ನಡೆಯುತ್ತಾ ಇದೆ. ಸ್ಟಿಂಗ್ ಆಪರೇಷನ್ ತೆಗೆದುಕೊಂಡು ಹೋಗಿ ಹೈಕಮಾಂಡ್‌ಗೆ ಕೊಟ್ಟು ರಾಜೀನಾಮೆ ಪಡೆದಿದ್ದಾರೆಂದು ಹೇಳಲಾಗ್ತಿದೆ. ಆ ಸ್ಟಿಂಗ್ ಆಪರೇಷನ್ ಹಿಂದೆ ಇರೋರು ಯಾರು ಚರ್ಚೆ ಆಗಬೇಕಲ್ವಾ ಎಂದು ಹೆಚ್‌ಡಿಕೆ ಹೇಳಿದ್ದಾರೆ. ನಕಲಿ ಸಿಮ್ ಬಳಸಿ ಸಿಎಂ ವಿರುದ್ಧ ಕುತಂತ್ರ ನಡೆಸಿದ್ದಾರೆಂಬ ಯಶವಂತಪುರ ಶಾಸಕ ಎಸ್.ಟಿ.ಸೋಮಶೇಖರ್



ಹೇಳಿಕೆಗೂ ಕೌಂಟರ್ ನೀಡಿದ ಅವರು, ಆ ಬಗ್ಗೆ ಎಸ್‌ಐಟಿಯಿಂದ ತನಿಖೆ ಮಾಡಿಸಲಿ. ಮುಂದಿನ ದಿನಗಳು ಕುಮಾರಸ್ವಾಮಿ ವರ್ಸಸ್ ಕಾಂಗ್ರೆಸ್ ಪಕ್ಷ ಎಂಬಂತಾಗಲಿದೆ. ಇದನ್ನು ಅರಗಿಸಿಕೊಳ್ಳಲಾರದೇ ಎಲ್ಲದಕ್ಕೂ ನನ್ನ ಮೇಲೆ ಹೇಳಿಕೆ ಕೊಡ್ತಾರೆ. ಅದಕ್ಕೆಲ್ಲಾ ನಾನು ಉತ್ತರ ಕೊಡುವುದಿಲ್ಲ ಎಂದವರು ತಿಳಿಸಿದ್ದಾರೆ.

ಸ್ಟಿಂಗ್ ಆಪರೇಷನ್ ಬಗ್ಗೆ ಕೆ.ಎನ್.ರಾಜಣ್ಣ ಏನು ಚರ್ಚೆ ಮಾಡಿದರು? ಸಂಪುಟದ ಮಂತ್ರೀನೇ ಮಾಡಿದ್ದು ಅಂತಾ ರಾಜಣ್ಣ ಹೇಳಿದ್ದು ಅಲ್ವಾ? ಹೀಗಿರುವಾಗ ರಾಜಣ್ಣ ಬಾಯಿ ಮುಚ್ಚಿಸಿದ್ದು ಯಾಕೆ? ಸಂಪುಟ ಸಭೆಯಲ್ಲಿ ನಿನ್ನೆ ಸಿಎಂ ಯಾಕೆ ಸ್ಟಿಂಗ್ ಆಪರೇಷನ್ ವಿಚಾರ ಪ್ರಸ್ತಾಪಿಸಿದರು? ಯಾವುದೋ ಫೈಲ್ ಇಟ್ಟುಕೊಂಡು ವಿಧಾನಸೌಧಕ್ಕೆ ಹೋಗ್ತಿದ್ರಲ್ಲ, ಯಾರು ಸ್ಟಿಂಗ್ ಮಾಡಿದ್ದು ಅಂತಾ ಅದರಲ್ಲಿ ಇರಬೇಕು ಅಲ್ಲವೇ? ಬೇರೆಯವರು ಮಾಡಿದ್ದಾರಾ ಅಥವಾ ಕುಮಾರಸ್ವಾಮಿ ಮಾಡಿದ್ದಾರಾ ಎಂಬುದು ಆ ಫೈಲ್ ಅಲ್ಲಿಯೇ ಇರಬೇಕಲ್ಲವೇ? ಆ ಸತ್ಯವನ್ನು ಜನರ ಮುಂದೆ ಇಡುವುದಕ್ಕೆ ಹೇಳಿ ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ.

ಅಂಗನವಾಡಿ ಮೇಲ್ವಿಚಾರಕರಿಗೂ ಸಿಪಿಆರ್ ತರಬೇತಿ ನೀಡಲು ಕ್ರಮ–ಜಿಲ್ಲಾಧಿಕಾರಿ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು : ಜಿಲ್ಲೆಯ ಅಂಗನವಾಡಿ ಮೇಲ್ವಿಚಾರಕರಿಗೂ ಅಕಖ ತರಬೇತಿ ನೀಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ತಿಳಿಸಿದರು.



"Heart Safe Tumkur – A People's CPR Movement" ಅಭಿಯಾನದ ಅಂಗವಾಗಿ ಇಂದು ತುಮಕೂರು ವಿಶ್ವವಿದ್ಯಾಲಯದ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿದ್ದ CPR ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈಗಾಗಲೇ ಜಿಲ್ಲೆಯಾದ್ಯಂತ ಸುಮಾರು 30,000 ಜನರಿಗೆ CPR ತರಬೇತಿ ನೀಡಲಾಗಿದೆ. ತುರ್ತು ಸಂದರ್ಭದಲ್ಲಿ ಸಾಮಾನ್ಯ ನಾಗರಿಕರೂ ಆತ್ಮವಿಶ್ವಾಸದಿಂದ ಅಕಖ ನೀಡಿ ಜೀವ ಉಳಿಸುವಂತಾಗಬೇಕು ಎಂಬುದು "Heart Safe Tumkur" ಅಭಿಯಾನದ ಪ್ರಮುಖ ಉದ್ದೇಶವಾಗಿದೆ ಎಂದರು.

ವಿದ್ಯಾರ್ಥಿಗಳು ಜೀವನದಲ್ಲಿ ಸವಾಲುಗಳನ್ನು ಎದುರಿಸಿ ಗುರಿ ಸಾಧಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. ವಿದ್ಯಾರ್ಥಿ ಜೀವನದಲ್ಲಿ ಮೂಲ ತತ್ವಗಳು, ನೈತಿಕತೆ, ಶಿಸ್ತು, ಧೈರ್ಯ ಮತ್ತು ಜವಾಬ್ದಾರಿ ಅತ್ಯಂತ ಪ್ರಮುಖ ಮೌಲ್ಯಗಳಾಗಿವೆ. ಪರಿಸ್ಥಿತಿಗಳು ಬದಲಾದರೂ ಈ ಮೂಲ ಮೌಲ್ಯಗಳನ್ನು ಎಂದಿಗೂ ಬದಲಾಯಿಸಬಾರದು ಎಂದು ಹೇಳಿದರು.

ಕ್ರೀಡಾ ಪಟು ಅಂಜು ಬಾಬಿ ಜಾರ್ಜ್ ಅವರ ಸಾಧನೆ ಹಾಗೂ ಪರಿಶ್ರಮವನ್ನು ಉಲ್ಲೇಖಿಸಿ, ಗುರಿ ಸಾಧಿಸುವ ಸಂದರ್ಭದಲ್ಲಿ ಭಯಕ್ಕೆ ಅವಕಾಶ ನೀಡಬಾರದು. ಅವಕಾಶಕ್ಕಾಗಿ ಕಾಯುವುದಕ್ಕಿಂತ ಅವಕಾಶವನ್ನು ಸೃಷ್ಟಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

"Failure is a part of Success" ಎಂಬುದನ್ನು ನೆನಪಿನಲ್ಲಿಟ್ಟು ಕೊಂಡು, ವೈಫಲ್ಯಗಳಿಂದ ನಿರಾಶರಾಗದೆ ಅವುಗಳಿಂದ ಪಾಠ ಕಲಿತು ಮುಂದೆ ಸಾಗಬೇಕು. ವಿದ್ಯಾರ್ಥಿಗಳು ಜ್ಞಾನ, ಕೌಶಲ್ಯ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸಿ ಕೊಂಡು ಸಮಾಜದ ಒಳಿತಿಗಾಗಿ ಕಾರ್ಯ ನಿರ್ವಹಿಸುವ ಮೂಲಕ "Students of Future India" ಆಗಿ ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಡಾ॥ ತಮೀಮ್ ಅವರ CPR ತರಬೇತಿ ಕಾರ್ಯ ಹಾಗೂ ಸಮಾಜ ಮುಖಿ ಸೇವೆ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ, ತುಮಕೂರು ವಿಶ್ವವಿದ್ಯಾಲಯದ ಪ್ರಾಂಶುಪಾಲರು ಹಾಗೂ ಶ್ರೀ ಸಿದ್ಧಾರ್ಥ ಮೆಡಿಕಲ್ ಕಾಲೇಜಿನ ತರಬೇತುದಾರರನ್ನು ಅಭಿನಂದಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಮಾತನಾಡಿ, "Safe Heart" ಪರಿಕಲ್ಪನೆಯಡಿ ತುರ್ತು ಸಂದರ್ಭದಲ್ಲಿ ಪ್ರತಿಯೊಬ್ಬರೂ ಜೀವ ಉಳಿಸುವ ಜವಾಬ್ದಾರಿಯನ್ನು ಹೊಂದಿರಬೇಕು ಎಂದು ತಿಳಿಸಿದರು. CPR ತರಬೇತುದಾರರಾದ ಡಾ॥ ತಮೀಮ್ ಅವರ ಸರಳ ಸ್ವಭಾವ, ಸೇವಾ ಮನೋಭಾವ ಹಾಗೂ ಸಮಾಜಕ್ಕಾಗಿ ಅವರು ಕೈಗೊಂಡಿರುವ ಕಾರ್ಯಗಳನ್ನು ಶ್ಲಾಘಿಸಿದರು. ಹೃದಯ ಸಂಬಂಧಿತ ತುರ್ತು ಪರಿಸ್ಥಿತಿಯಲ್ಲಿ ಸಮಯೋಚಿತವಾಗಿ CPR ನೀಡುವುದರಿಂದ ಅಮೂಲ್ಯ ಜೀವವನ್ನು ಉಳಿಸಬಹುದಾಗಿದೆ ಎಂದು ತಿಳಿಸಿದರು.

ಮಾಜಿ ಪ್ರಧಾನ ಮಂತ್ರಿ ಡಾ. ಮನ ಮೋಹನ್ ಸಿಂಗ್ ಅವರ ಹೃದಯ ಸಂಬಂಧಿತ ತುರ್ತು ಪರಿಸ್ಥಿತಿಯ ಸಂದರ್ಭವನ್ನೂ ಉಲ್ಲೇಖಿಸಿ, ಸಮಯೋಚಿತ ವೈದ್ಯಕೀಯ ನೆರವು ಹಾಗೂ ಅಕಖ ಅರಿವಿನ ಮಹತ್ವವನ್ನು ವಿವರಿಸಿದರು. ವಿದ್ಯಾರ್ಥಿಗಳು ತಾವು ಕಲಿತ ಜೀವ ಉಳಿಸುವ ಕೌಶಲ್ಯಗಳನ್ನು ಅಗತ್ಯವಿರುವ ಸಂದರ್ಭದಲ್ಲಿ ಸಮಾಜದ ಒಳಿತಿಗಾಗಿ ಬಳಸಬೇಕು ಎಂದು ಕರೆ ನೀಡಿದರು.

ಶ್ರೀ ಸಿದ್ಧಾರ್ಥ ಮೆಡಿಕಲ್ ಕಾಲೇಜಿನ ಡಾ॥ ತಮೀಮ್ ಹಾಗೂ ತರಬೇತುದಾರರು CPRನ ಮೂಲ ಭೂತ ವಿಧಾನಗಳು, ಹೃದಯಾಘಾತ ಸಂಭವಿಸಿದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ತುರ್ತು ಕ್ರಮಗಳು ಹಾಗೂ ಜೀವ ಉಳಿಸುವ ಕೌಶಲ್ಯಗಳ ಕುರಿತು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿ ನೀಡಿದರು. ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ CPR ವಿಧಾನವನ್ನು ಪ್ರಾಯೋಗಿಕವಾಗಿ ಕಲಿತು ಕೊಂಡರು.

ಕಾರ್ಯಕ್ರಮದ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಡಾ: ಸಿದ್ದ ರಾಮಣ್ಣ ಅವರು "ನಶೆ ಮುಕ್ತ ಭಾರತ" ಪ್ರತಿ ಜ್ಞಾವಿಧಿ ಬೋಧಿಸಿದರು. ಸಮಾರಂಭದಲ್ಲಿ ತುಮಕೂರು ವಿಶ್ವವಿದ್ಯಾಲಯದ ಕಲಾ ಮತ್ತು ವಿಜ್ಞಾನ ಕಾಲೇಜಿನ ಪ್ರಾಂಶುಪಾಲರುಗಳು, ಸಿಪಿಆರ್ ತರಬೇತಿದಾರರು, ವಿದ್ಯಾರ್ಥಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

"Simple Skills. Real Impact. Safer Communities" ಎಂಬ ಆಶಯದೊಂದಿಗೆ ಯುವಜನರಲ್ಲಿ CPR ಕುರಿತು ಜಾಗೃತಿ ಮೂಡಿಸುವ ಮೂಲಕ ತುಮಕೂರನ್ನು "Heart Safe Tumkur" ಆಗಿ ರೂಪಿಸುವ ಅಭಿಯಾನಕ್ಕೆ ಮತ್ತಷ್ಟು ಬಲ ನೀಡಲಾಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ತುಮಕೂರು ದಸರಾ 2026ರ ಆಹ್ವಾನ ಪತ್ರಿಕೆಗಳನ್ನು ನೀಡಿದರು.

'ಪ್ರಧಾನಿ ನರೇಂದ್ರ ಮೋದಿಯವರ ಆಡಳಿತ ಜಗತ್ತಿಗೆ ಮಾದರಿ' ತುಮಕೂರಿನಲ್ಲಿ ಸಂಕಲ್ಪ ಅಭಿಯಾನ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಗುಜರಾತ್ ಮುಖ್ಯ ಮಂತ್ರಿಯಾಗಿ, ದೇಶದ ಪ್ರಧಾನಿಯಾಗಿ 25 ವರ್ಷ ಆಡಳಿತ ಸೇವೆ ನಡೆಸಿದ ಗೌರವಾರ್ಥ ಜಿಲ್ಲಾ ಬಿಜೆಪಿಯಿಂದ ಬುಧವಾರ ನಗರದಲ್ಲಿ ಸೇವಾ ಸಂಕಲ್ಪ ಅಭಿಯಾನ ಹಮ್ಮಿಕೊಳ್ಳಲಾಗಿತ್ತು.



ಇದಕ್ಕೂ ಮೊದಲು ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಶಶಿಕಿರಣ್ ನೇತೃತ್ವದಲ್ಲಿ ಜಿಲ್ಲೆಯ ವಿವಿಧ ಮಂಡಳಗಳ ಯುವ ಮೋರ್ಚಾ ಕಾರ್ಯಕರ್ತರು ಸೇವಾ ಜ್ಯೋತಿ ಯಾತ್ರೆ ನಡೆಸಿದರು. ನಂತರ ಮಹಾವೀರ ಭವನದಲ್ಲಿ ವಿಕಸಿತ ಭಾರತ ಸಂಕಲ್ಪ ಸಭೆ – ಜಿಲ್ಲಾ ಮಟ್ಟದ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಜೀಅವರ ಭಾಷಣ ವೀಕ್ಷಣೆ ವ್ಯವಸ್ಥೆ ಮಾಡಲಾಗಿತ್ತು.


ಸಮಾರಂಭದಲ್ಲಿ ಮಾತನಾಡಿದ ಶಾಸಕ ಬಿ.ಸುರೇಶ್‌ಗೌಡರು, ಪ್ರಧಾನಿ ನರೇಂದ್ರ ಮೋದಿಯವರು ಬುಧವಾರ ಈ ದೇಶದ ರಾಜಕೀಯ ಚರಿತ್ರೆಯಲ್ಲಿ ಹೊಸ ಅಧ್ಯಾಯವೊಂದನ್ನು ಬರೆದಿದ್ದಾರೆ. ಅವರು 2001 ರ ಅಕ್ಟೋಬರ್ 1 ರಂದು ಗುಜರಾತ್ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ, ನಂತರ 2014 ರಲ್ಲಿ ಈ ದೇಶದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡು ಸತತವಾಗಿ 25 ವರ್ಷಗಳ ಕಾಲ ಅತ್ಯಂತ ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಈ ದೇಶದ ಸೇವೆ ಮಾಡಿದ್ದಾರೆ.ಇದು ನಮ್ಮ ದೇಶದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯಬೇಕಾದ ಒಂದು ಅಧ್ಯಾಯ ಎಂದು ಶ್ಲಾಘಿಸಿದರು. ಪ್ರಧಾನಿ ಮೋದಿವರು ಇಂದು ತಮ್ಮ ಭಾಷಣದಲ್ಲಿ ಐದು ಗುರಿಗಳನ್ನು ಜನತೆಯ ಮುಂದೆ ಇಟ್ಟು ಇದನ್ನು ನಾವು ಮಾಡಿಯೇ ಸಿದ್ಧ ಎಂದು ಘೋಷಿಸಿದ್ದಾರೆ.

ಅವರು ಹೇಳಿದ ಐದು ಗುರಿಗಳು: 2047 ಕ್ಕೆ ವಿಕಸಿತ ಭಾರತದ ಕನಸು ನನಸು ಮಾಡುವುದು, ಜಗತ್ತಿನ ಮೊದಲ ಮೂರು ಆರ್ಥಿಕತೆಗಳಲ್ಲಿ ಭಾರತವನ್ನು ತರುವುದು, ಆತ್ಮನಿರ್ಭರ ಭಾರತದ ಕನಸನ್ನು ನನಸು ಮಾಡುವುದು, ಜಾಗತಿಕ ಉತ್ಪಾದನಾ ಹಬ್ ಆಗಿ ಭಾರತವನ್ನು ರೂಪಿಸುವುದು ಮತ್ತು ಭಾರತವು ಒಲಿಂಪಿಕ್ ಕ್ರೀಡಾ ಕೂಟದ ಆತಿಥ್ಯವನ್ನು ವಹಿಸುವುದನ್ನು ಸಾಧ್ಯ ಮಾಡುವುದು' ಇಂಥ ಗುರಿಗಳನ್ನು ಇದುವರೆಗೆಯಾವ ನಾಯಕರೂ ದೇಶದ ಮುಂದೆ ಇರಿಸಿರಲಿಲ್ಲ ಎಂದರು.

ಅದಕ್ಕಾಗಿಯೇ ಮಂಗಳವಾರ ಸೇರಿದ್ದ ಕೇಂದ್ರ ಸಂಪುಟ ಸಭೆಯಲ್ಲಿ ಪ್ರಧಾನಿಯವರನ್ನು ಅಭಿನಂದಿಸುವ ಮಹತ್ವದ ನಿರ್ಣಯ ಕೈಗೊಳ್ಳಲಾಗಿದೆ. ಪ್ರಧಾನಿ ಮೋದಿಯವರು ಕಳೆದ 25 ವರ್ಷಗಳಲ್ಲಿ ಅತ್ಯಂತ ನಿಷ್ಕಳಂಕವಾಗಿ ಮತ್ತು ದೇಶ ಹಾಗೂ ನಾಗರಿಕರು ಮೊದಲು ಎಂದು ರಾಜಕಾರಣ ಮಾಡಿದ್ದಾರೆ ಎಂದು ಸುರೇಶ್‌ಗೌಡರು ಹೇಳಿದರು.

ನಗರ ಶಾಸಕ ಜಿ.ಬಿ. ಜ್ಯೋತಿಗಣೇಶ್ ಮಾತನಾಡಿ, ಪ್ರಧಾನಿ ಮೋದಿಯವರ ಆಡಳಿತ, ಅವರ ನುಡಿ ಕಾರ್ಯಕರ್ತರಿಗೆ ಪ್ರೇರಣೆಯಾಗಿ ಉತ್ಸಾಹ ತುಂಬುತ್ತದೆ. ಎಲ್ಲದಕ್ಕಿಂಥಾ ದೇಶ ಮೊದಲು ಎಂಬ ಮೋದಿಯವರ ಆಶಯವನ್ನು ಎಲ್ಲರೂ ಅನುಸರಿಸಿ ದೇಶಕ್ಕಾಗಿ ದುಡಿಯಬೇಕು, ದೇಶಕ್ಕಾಗಿ ಬದುಕಬೇಕು. ಬಡವರು, ದೀನ ದಲಿತರ ಸೇವೆ ಮಾಡಬೇಕು, 2047ರ ವೇಳೆ ವಿಕಸಿತ ಭಾರತ ನೋಡಬೇಕು, ಅದಕ್ಕಾಗಿ ಎಲ್ಲರೂ ಕೈ ಜೋಡಿಸಬೇಕು ಎಂದರು.

ದೇಶವನ್ನು ಮುನ್ನಡೆಸುವ ಒಬ್ಬ ನಾಯಕನಿಗೆ ಇಂಥ ಕನಸುಗಳು ಇರಬೇಕಾಗುತ್ತದೆ ಕನಸುಗಳು ಇದ್ದರೆ ಮಾತ್ರ ಆತ ಅವುಗಳನ್ನು ನನಸು ಮಾಡಲು ಮುನ್ನಡಿಯಿಡುತ್ತಾನೆ.



ಆದರೆ, ನಮ್ಮ ದೇಶದ ವಿರೋಧ ಪಕ್ಷಗಳಿಗೆ ಇಂಥಯಾವ ಕನಸುಗಳೂ ಇಲ್ಲ. ಅವು ಕೇವಲ ನಕಾರಾತ್ಮಕ ಮತ್ತು ಅಸಹಕಾರದ ರಾಜಕಾರಣದಲ್ಲಿ ತೊಡಗಿವೆ. ಇದರಿಂದ ದೇಶದ ಪ್ರಗತಿಗೆ ಹಿನ್ನಡೆಯಾಗುತ್ತದೆಯೇ ಹೊರತು ಇನ್ನೇನೂ ಆಗುವುದಿಲ್ಲ ದೇಶದ ಪ್ರಗತಿಗೆ ಮಾರಕವಾದ ವಿರೋಧ ಪಕ್ಷಗಳ ಷಡ್ಯಂತ್ರಗಳನ್ನು ಸೋಲಿಸುವ ದೃಷ್ಟಿಯಿಂದಲೇ ಪ್ರಧಾನಿಯವರು ಇಂದು ಐದು ಘೋಷಣೆಗಳನ್ನು ಮಾಡಿದ್ದಾರೆ ಎಂದು ಹೇಳಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ರವಿಶಂಕರ್ ಹೆಬ್ಬಾಕ, ವಿಧಾನ ಪರಿಷತ್ ಸದಸ್ಯ ಚಿದಾನಂದ ಗೌಡ, ರಾಜ್ಯ ಬಿಜೆಪಿ ಕಾಯದರ್ಶಿ ಅಂಬಿಕಾ ಹುಲಿನಾಯ್ಕರ್, ರಾಜ್ಯ ಬಿಜೆಪಿ ರೈತ ಮೋರ್ಚಾ ಉಪಾಧ್ಯಕ್ಷ ಬ್ಯಾಟ ರಂಗೇಗೌಡ, ಗುಬ್ಬಿ ನಂಜೇಗೌಡ ಸೇರಿದಂತೆ ಬಿಜೆಪಿಯ ವಿವಿಧ ಮೋರ್ಚಾಗಳ ಮುಖಂಡರು ಭಾಗವಹಿಸಿದ್ದರು.

ಮೈಸೂರು ದಸರಾ ಪರಂಪರೆ, ಇತಿಹಾಸ ಮತ್ತು ವೈಭವ ದಸರೆಯ ಮಹತ್ವ

ಸೂರ್ಯಪ್ರಗತಿನ್ಯೂಸ್.ಕಾಂ

ಭಾರತೀಯ ಹಬ್ಬಗಳು ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆಯೊಂದಿಗೆ ಮಾನವೀಯ ಮೌಲ್ಯಗಳು ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ತಲುಪಿಸುವ ಪ್ರಮುಖ ಮಾಧ್ಯಮಗಳಾಗಿವೆ. ಇಂದಿನ ಯುವ ಪೀಳಿಗೆಗೆ ಇದರ ಪರಿಚಯವನ್ನು ಮಾಡುವುದು ಅತೀ ಅಗತ್ಯ ಹಾಗೂ ಭಾರತೀಯರಿಗೆ ನಮ್ಮ ದೇಶದ ಸಾಂಸ್ಕೃತಿಕ ಶ್ರೀಮಂತಿಕೆ ಬಗ್ಗೆ ಹೆಮ್ಮೆಯನ್ನು ಹೊಂದುವಂತಹ ಒಂದು ಸುವರ್ಣಾವಕಾಶವಾಗಿದೆ. "ದಸರಾ" ಭಾರತದ ಪ್ರಮುಖ ಪಾರಂಪರಿಕ ಹಬ್ಬಗಳಲ್ಲಿ ಒಂದಾಗಿದೆ. ನವರಾತ್ರಿ ಮತ್ತು ವಿಜಯದಶಮಿಯನ್ನು ಒಳಗೊಂಡ ಹತ್ತು ದಿನಗಳ ಈ ಉತ್ಸವವು ಪೌರಾಣಿಕ, ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಮಹತ್ವವನ್ನು ಹೊಂದಿದೆ. ಮಾತ್ರವಲ್ಲ, ಅಂತರಾಷ್ಟ್ರೀಯ ಮಟ್ಟದಲ್ಲಿ "ಮೈಸೂರು ದಸರಾ" ಆಚರಣೆಯ ವೈಶಿಷ್ಟ್ಯವನ್ನು ಗಮನಿಸಿ, 2008ರಲ್ಲಿ ಯುನೆಸ್ಕೋ ದಸರಾ ಆಚರಣೆಯ ಕಲಾಪ್ರಕಾರಗಳನ್ನು 'ಮಾನವೀಯತೆಯ ಅಮೂರ್ತ ಸಾಂಸ್ಕೃತಿಕ ಪರಂಪರೆ' ಎಂದು ಗುರುತಿಸಿದೆ.


ಪ್ರಾಚೀನ ಕಾಲದ ದಸರಾ ವೈಭವ

ಶರದೃತುವಿನಲ್ಲಿ ಆಚರಿಸಲಾಗುವ ನವರಾತ್ರಿಯು ದೇವಿಯ ವಿವಿಧ ರೂಪಗಳ ಆರಾಧನೆಗೆ ಸಮರ್ಪಿತವಾಗಿದ್ದು, ವಿಜಯದಶಮಿಯನ್ನು ವಿಜಯದ ಸಂಕೇತವಾಗಿ ಆಚರಿಸಲಾಗುತ್ತದೆ. ದುಷ್ಟಶಕ್ತಿಯ ಮೇಲೆ ಸತ್ಕಾರ್ಯ ಮತ್ತು ಧರ್ಮದ ವಿಜಯವೇ ಇದರ ಪ್ರಮುಖ ಸಂದೇಶ. ದೇಶದ ವಿವಿಧ ಭಾಗಗಳಲ್ಲಿ ವಿಭಿನ್ನ ರೀತಿಯಲ್ಲಿ ದಸರಾ ಆಚರಿಸಲಾಗುತ್ತಿದ್ದರೂ, ಮೈಸೂರು ದಸರಾ ತನ್ನ ವಿಶಿಷ್ಟ ಪರಂಪರೆ, ರಾಜವೈಭವ ಮತ್ತು ಸಾಂಸ್ಕೃತಿಕ ಆಚರಣೆಗಳಿಂದ ವಿಶ್ವಪ್ರಸಿದ್ಧವಾಗಿದೆ.

ನವರಾತ್ರಿ ಮತ್ತು ದೇವಿ ಆರಾಧನೆ

ಪುರಾಣಗಳಲ್ಲಿ ಮಹಿಷಾಸುರನಂತಹ ಅಸುರ ಶಕ್ತಿಗಳ ವಿರುದ್ಧ ಚಾಮುಂಡೇಶ್ವರಿ ದೇವಿಯ ವಿಜಯದ ಕಥೆಗಳು ನವರಾತ್ರಿ ಆಚರಣೆಯೊಂದಿಗೆ ಸಂಬಂಧ ಹೊಂದಿವೆ. ಅಸುರರ ಸಂಹಾರದ ಮೂಲಕ ಧರ್ಮ ಮತ್ತು ಸತ್ಯದ ವಿಜಯವನ್ನು ಸಂಭ್ರಮಿಸಲಾಗುತ್ತದೆ. ಮೈಸೂರು ದಸರೆಯಲ್ಲಿ ಚಾಮುಂಡೇಶ್ವರಿ ದೇವಿಯ ಆರಾಧನೆಗೆ ವಿಶೇಷ ಸ್ಥಾನವಿದೆ.

ಪ್ರಕೃತಿಯನ್ನು ಮಾತೃಸ್ವರೂಪವಾಗಿ ಕಾಣುವ ಭಾರತೀಯ ಪರಂಪರೆಯಲ್ಲಿ ಶಕ್ತಿಯನ್ನು ಶೈಲಪುತ್ರೀ, ಬ್ರಹ್ಮಚಾರಿಣೀ, ಚಂದ್ರಘಂಟಾ, ಕೂಷ್ಮಾಂಡಾ, ಸ್ಕಂದಮಾತಾ, ಕಾತ್ಯಾಯನೀ, ಕಾಲರಾತ್ರಿ, ಮಹಾಗೌರಿ ಮತ್ತು ಸಿದ್ಧಿಧಾತ್ರಿ ಎಂಬ ನವರೂಪಗಳಲ್ಲಿ ಆರಾಧಿಸಲಾಗುತ್ತದೆ. ಘಟಸ್ಥಾಪನೆ, ದೇವಿ ಪೂಜೆ, ಸರಸ್ವತಿ ಪೂಜೆ, ದುರ್ಗಾಷ್ಟಮಿ, ಆಯುಧ ಪೂಜೆ ಹಾಗೂ ಇತರ ಧಾರ್ಮಿಕ ವಿಧಿ–ವಿಧಾನಗಳು ಈ ಅವಧಿಯಲ್ಲಿ ನಡೆಯುತ್ತವೆ. ಹತ್ತನೆಯ ದಿನವಾದ ವಿಜಯದಶಮಿಯು ವಿಜಯಲಕ್ಷ್ಮಿ ಅಥವಾ ಅಪರಾಜಿತಾ ದೇವಿಯ ಆರಾಧನೆಯನ್ನು ನಡೆಸಲಾಗುತ್ತದೆ. ನವರಾತ್ರಿಯ ಒಂಭತ್ತು ದಿನಗಳು ದೇವಿಯ ಒಂಭತ್ತು ವಿವಿಧ ಬಣ್ಣಗಳನ್ನು ಸಂಕೇತಿಸುತ್ತವೆ. ದಿನ–1 ಕಿತ್ತಳೆ, ದಿನ–2 ಬಿಳಿ, ದಿನ–3 ಕೆಂಪು, ದಿನ–4 ಕಡುನೀಲಿ, ದಿನ–5 ಹಳದಿ, ದಿನ–6 ಹಸಿರು, ದಿನ–7 ಬೂದು, ದಿನ–8 ನೇರಳೆ, ದಿನ–9 ನವಿಲು



ಹಸಿರು ಬಣ್ಣಗಳಿಂದ ದೇವಿಯನ್ನು ಅಲಂಕರಿಸಲಾಗುತ್ತದೆ. ಅಲ್ಲದೇ, ಹೆಣ್ಣುಮಕ್ಕಳೂ ಸಹ ನವರಾತ್ರಿಯ ಪ್ರತಿದಿನವೂ ಅದೇ ಬಣ್ಣದ ಉಡುಪುಗಳನ್ನು ಧರಿಸಿ ಸಂಭ್ರಮಿಸುತ್ತಾರೆ.

ವಿಜಯದಶಮಿಗೆ ರಾಮಾಯಣದ ಹಿನ್ನೆಲೆಯೂ ಇದೆ. ಶ್ರೀರಾಮನು ರಾವಣನನ್ನು ಸಂಹರಿಸಿದ ದಿನವೆಂದು ಇದನ್ನು ಆಚರಿಸುವ ಸಂಪ್ರದಾಯವಿದೆ. ಹೀಗಾಗಿ ದಸರಾ, ದೇವಿಯ ವಿಜಯ ಮತ್ತು ಶ್ರೀರಾಮನ ವಿಜಯ ಎರಡನ್ನೂ ಪ್ರತಿನಿಧಿಸುವ ಮಹತ್ವದ ಹಬ್ಬವಾಗಿದೆ.

ಐತಿಹಾಸಿಕ ಹಿನ್ನೆಲೆ

ಮೈಸೂರು ದಸರೆಯ ಇತಿಹಾಸ ಅತ್ಯಂತ ಪ್ರಾಚೀನವಾಗಿದೆ. ಭಾರತದ ವಿವಿಧ ರಾಜವಂಶಗಳ ಕಾಲದಲ್ಲಿಯೇ ದುರ್ಗಾ ಮತ್ತು ಮಹಿಷಮರ್ದಿನಿಯ ಆರಾಧನೆಯ ಶಿಲ್ಪಗಳು ಕಂಡುಬರುವುದರಿಂದ ದಸರಾ ಆಚರಣೆಯು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿರುವುದಾಗಿ ಪರಿಗಣಿಸಲಾಗಿದೆ. ಶ್ರೀರಂಗಪಟ್ಟಣದ ಪತನದ ನಂತರ ಮೈಸೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು 1799ರಲ್ಲಿ ಮೈಸೂರಿನಲ್ಲಿ ದಸರಾ ಉತ್ಸವಕ್ಕೆ ಮರುಚಾಲನೆ ನೀಡಿದರು.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ದಸರಾ ಉತ್ಸವವು ಅತ್ಯಂತ ವೈಭವದಿಂದ ನಡೆಯುತ್ತಿತ್ತು. ಇಂದಿನ ಮೈಸೂರು ದಸರಾ ವಿಜಯನಗರದ ಈ ಪರಂಪರೆಯ ಮುಂದುವರಿದ ರೂಪವಾಗಿದೆ.

ಮೈಸೂರು ಅರಸರಾದ ಶ್ರೀ ರಾಜ ಒಡೆಯರ್ ಅವರು ಸಾ.ಶ. 1610ರಲ್ಲಿ ಶ್ರೀರಂಗಪಟ್ಟಣದಲ್ಲಿ ಹತ್ತು ದಿನಗಳ ದಸರಾ ಉತ್ಸವವನ್ನು ಆರಂಭಿಸಿದರು. ನಂತರ ಮೈಸೂರು ಒಡೆಯರ ಆಡಳಿತದಲ್ಲಿ ದಸರಾ ಉತ್ಸವವು ರಾಜವೈಭವದ ಪ್ರಮುಖ ಸಂಕೇತವಾಗಿ ಬೆಳೆಯಿತು. 1648ರಲ್ಲಿ ರಣಧೀರ ಕಂಠೀರವ ನರಸರಾಜ ಒಡೆಯರ್ ಅವರ ಕಾಲದ ದಸರಾ ಆಚರಣೆಗಳ ವಿವರಗಳನ್ನು ಕವಿ ಗೋವಿಂದವೈದ್ಯರು ತಮ್ಮ 'ಕಂಠೀರವ ನರಸರಾಜ ವಿಜಯ' ಕೃತಿಯಲ್ಲಿ ದಾಖಲಿಸಿದ್ದಾರೆ. ಆ ಕಾಲದಲ್ಲಿ ದೇವಿ ಆರಾಧನೆ, ಆಯುಧ ಪೂಜೆ, ರಾಜದರ್ಬಾರ್, ಮಲ್ಲಯುದ್ಧ, ನೃತ್ಯ, ಸಂಗೀತ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ದಸರೆಯ ಪ್ರಮುಖ ಭಾಗವಾಗಿದ್ದವು.

ಕಂಠೀರವ ನರಸರಾಜ ಒಡೆಯರ್

ಮೈಸೂರು ಒಡೆಯರ ಕಾಲದಲ್ಲಿ ದಸರಾ ರಾಜಮನೆತನದ ಪ್ರಮುಖ ಉತ್ಸವವಾಗಿತ್ತು. ನವರಾತ್ರಿಯ ಸಂದರ್ಭದಲ್ಲಿ ರಾಜರು ಕುಲದೇವತೆ ಹಾಗೂ ಇತರ ದೇವತೆಗಳನ್ನು ಪೂಜಿಸಿ, ಪಟ್ಟದ ಆನೆ ಮತ್ತು ಕುದುರೆಗಳಿಗೆ ಪೂಜೆ ಸಲ್ಲಿಸುತ್ತಿದ್ದರು. ರಾಜದರ್ಬಾರ್, ಆಯುಧ ಪೂಜೆ ಮತ್ತು ವಿಜಯದಶಮಿ ಮೆರವಣಿಗೆಗಳು ಪ್ರಮುಖ ಕಾರ್ಯಕ್ರಮಗಳಾಗಿದ್ದವು.

ಚತುರಂಗಬಲ ಆಯುಧ ಪೂಜೆಗೆ (32 ಆಯುಧಗಳ ಪೂಜೆ) ಅಣಿಗೊಂಡ ಆಯುಧಗಳು

ಮಹಾನವಮಿಯಂದು ಪಟ್ಟದ ಕತ್ತಿ ಸೇರಿದಂತೆ ರಾಜವಂಶದ ಆಯುಧಗಳನ್ನು ವಿಶೇಷವಾಗಿ ಪೂಜಿಸಲಾಗುತ್ತದೆ. ಹಿಂದಿನ ಕಾಲದಲ್ಲಿ ರಾಜದರ್ಬಾರ್, ಮಲ್ಲಯುದ್ಧ, ಸಂಗೀತ, ನೃತ್ಯ, ಬಾಣ–ಬಿರುಸು ಮತ್ತು ವಿವಿಧ ರಾಜಕೀಯ ಹಾಗೂ ಸಾಂಸ್ಕೃತಿಕ ಪ್ರದರ್ಶನಗಳು ದಸರೆಯ ಭಾಗವಾಗಿದ್ದವು. ಕಾಲ ಬದಲಾದಂತೆ ಅವುಗಳಲ್ಲಿ ಹಲವು ರೂಪಾಂತರಗೊಂಡಿದ್ದರೂ, ದಸರೆಯ ಮೂಲ ಪರಂಪರೆ ಇಂದಿಗೂ ಮುಂದುವರೆದಿದೆ.

ಮುಮ್ಮಡಿ ಕೃಷ್ಣರಾಜ ಒಡೆಯರ್



ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದಸರಾ ಆಚರಣೆ ವಿಶೇಷ ವೈಭವವನ್ನು ಪಡೆದಿತ್ತು. ಮಹಾನವಮಿಯಂದು ಕತ್ತಿ, ಖಡ್ಗ ಸೇರಿದಂತೆ ರಾಜವಂಶದ ವಿವಿಧ ಆಯುಧಗಳಿಗೆ ಪೂಜೆ ಸಲ್ಲಿಸಲಾಗುತ್ತಿತ್ತು. ವಿಜಯದಶಮಿಯಂದು ರಾಜರು ರಾಜಪೋಷಾಕಿನಲ್ಲಿ ಖಡ್ಗ ಹಿಡಿದು ಮೆರವಣಿಗೆಯಲ್ಲಿ ಭಾಗವಹಿಸುತ್ತಿದ್ದರು. ಆ ಕಾಲದಲ್ಲಿ ಇಂದಿನಂತೆ ಚಿನ್ನದ ಅಂಬಾರಿಯಲ್ಲಿ ರಾಜರು ಸಂಚರಿಸುತ್ತಿರಲಿಲ್ಲ. ಆನೆಗಳು ಎಳೆಯುವ ಬೆಳ್ಳಿಯ ರಥದಲ್ಲಿ ಮಹಾರಾಜರು ಕುಳಿತು ಮೆರವಣಿಗೆಯಲ್ಲಿ ಸಾಗುತ್ತಿದ್ದರು. ನಂತರ ಕುದುರೆಯೇರಿ ಸೈನ್ಯ ವೀಕ್ಷಿಸಿ, ಬನ್ನಿಮರಕ್ಕೆ ಪೂಜೆ ಸಲ್ಲಿಸುವ ಸಂಪ್ರದಾಯವೂ ಇತ್ತು. ಚಾಮುಂಡಿ ಬೆಟ್ಟದ ವಿಶೇಷತೆಮೈಸೂರು ದಸರೆಯ ಧಾರ್ಮಿಕ ಹಿನ್ನೆಲೆಯ ಪ್ರಮುಖ ಕೇಂದ್ರ ಚಾಮುಂಡಿ ಬೆಟ್ಟ. ನವರಾತ್ರಿಯ ಸಂದರ್ಭದಲ್ಲಿ ಚಾಮುಂಡೇಶ್ವರಿ ದೇವಿಗೆ ಪ್ರತಿದಿನ ವಿಶೇಷ ಅಲಂಕಾರ ಮತ್ತು ಪೂಜೆಗಳನ್ನು ನೆರವೇರಿಸಲಾಗುತ್ತದೆ.

ದೇವಿಯನ್ನು ವಿವಿಧ ಶಕ್ತಿರೂಪಗಳಲ್ಲಿ ಅಲಂಕರಿಸುವ ಸಂಪ್ರದಾಯವಿದೆ. ನವರಾತ್ರಿಯ ಹತ್ತು ದಿನಗಳ ಅವಧಿಯಲ್ಲಿ ದೇವಿಯ ವಿವಿಧ ಅಲಂಕಾರಗಳು ಭಕ್ತರನ್ನು ಆಕರ್ಷಿಸುತ್ತವೆ. ವಿಜಯದಶಮಿಯಂದು ದೇವಿಯನ್ನು ಅಪರಾಜಿತೆಯ ರೂಪದಲ್ಲಿ ಆರಾಧಿಸಲಾಗುತ್ತದೆ.ನವರಾತ್ರಿಯ ಮತ್ತೊಂದು ವಿಶೇಷ ಆಚರಣೆ ಕುಮಾರಿ ಪೂಜೆ. 2–10 ವಯಸ್ಸಿನ ಬಾಲಕಿಯರನ್ನು ದೇವಿಯ ವಿವಿಧ ರೂಪಗಳ ಪ್ರತೀಕವಾಗಿ ಪೂಜಿಸುವ ಸಂಪ್ರದಾಯವೂ ಕೆಲವು ಕಡೆಗಳಲ್ಲಿ ಕಂಡುಬರುತ್ತದೆ.

ಅರಮನೆಯ ಪ್ರಮುಖ ಆಕರ್ಷಣೆ ಸಿಂಹಾಸನ

ಆಕರ್ಷಣೆ ಮೈಸೂರು ಸಂಸ್ಥಾನದಲ್ಲಿ ಮತ್ತೊಂದು ಪ್ರಮುಖ ಸಿಂಹಾಸನವಾಗಿದೆ. ಇದು ರತ್ನಖಚಿತ ಚಿನ್ನದ ಸಿಂಹಾಸನವಾಗಿದ್ದು, ಇದಕ್ಕೆ ಅದರದೇ ಆದ ಇತಿಹಾಸವಿದೆ. ದಸರಾ ಸಂದರ್ಭಗಳಲ್ಲಿ ಮಾತ್ರ ವೀಕ್ಷಣೆಗೆ ಸಾರ್ವಜನಿಕರಿಗೆ ಲಭ್ಯವಿದ್ದು, ಈ ಚಿನ್ನದ ಸಿಂಹಾಸನವು ದಸರಾ ಮುಂಚೆ ಒಂದು ಶುಭ ಮುಹೂರ್ತದಲ್ಲಿ ಖಾಸಗಿ ದರ್ಬಾರ್ ಹಾಲಿನಲ್ಲಿ ಜೋಡಣೆ ಮಾಡಲಾಗುತ್ತದೆ. ಇದನ್ನು ಸುಮಾರು 30 ರಿಂದ 40 ದಿನಗಳ ಕಾಲ ವೀಕ್ಷಣೆ ಮಾಡಬಹುದಾಗಿದೆ. ಈ ಚಿನ್ನದ ಸಿಂಹಾಸನದಲ್ಲಿ ಹಲವು ವೈಶಿಷ್ಟ್ಯಗಳು ಕೂಡಿದ್ದು, ಈ ಚಿನ್ನದ ಸಿಂಹಾಸನ ಬೆಳ್ಳಿಯ ಮೆಟ್ಟಿಲು ಹೊಂದಿದ್ದು, ಎರಡೂ ಬದಿಯಲ್ಲಿ ದರ್ಪಣಾ ಸುಂದರಿಯರು ಇದ್ದು, ಮಹಾರಾಜರಿಗೆ ಸ್ವಾಗತ ಮಾಡುವ ಭಂಗಿಯಲ್ಲಿ ನಿಂತಿರುವ ಹಾಗೆ ರೂಪಿಸಲಾಗಿದೆ. ಇನ್ನು ಈ ಚಿನ್ನದ ಸಿಂಹಾಸನದ ಮೇಲ್ಭಾಗದಲ್ಲಿ ಚಿನ್ನದ ಚಾಮರ ಹೊಂದಿದ್ದು, ಅದಕ್ಕೆ ಮಯೂರ ಪಕ್ಷಿಯನ್ನು ಜೋಡಿಸಲಾಗಿದೆ. ಸುತ್ತಲೂ ಮುತ್ತುಗಳಿಂದ ಅಲಂಕೃತವಾಗಿದೆ. ಇನ್ನು ಸಿಂಹಾಸನದ ಹಿಂಭಾಗದ ಮೇಲ್ಭಾಗದಲ್ಲಿ ಲಕ್ಷ್ಮಿ, ಚಾಮುಂಡೇಶ್ವರಿ ಮತ್ತು ಸರಸ್ವತಿಯ ಮೂರ್ತಿ ಇದ್ದು, ತಳಭಾಗದಲ್ಲಿ ವಿಜಯ ದಶಮಿಯ ದಿನ ಸಿಂಹಾಸನಕ್ಕೆ ರಾಜವಂಶಸ್ಥರಿಂದ ಹೋಮ–ಹವನ ನಡೆಸಿ ಸಿಂಹವನ್ನು ಜೋಡಿಸುತ್ತಾರೆ.ಮೈಸೂರು ಅರಸರ ಬೆಡಗಿನ ರತ್ನಖಚಿತ ಸ್ವರ್ಣ ಸಿಂಹಾಸನ "ಸ್ವರ್ಣ ಕಲಾ ನಿಪುಣ" ಸಿಂಗಣ್ಣಾಚಾರ್ಯ ಈ ಸಿಂಹಾಸನವನ್ನು ಚಿನ್ನಾಭರಣಗಳು, ಬೆಲೆಬಾಳುವ ರತ್ನಗಳು ಮತ್ತು ಬೆಳ್ಳಿಯ ಪ್ರತಿಮೆಗಳಿಂದ ಶೃಂಗರಿಸಿದ್ದಾರೆ. ಕಾಲಕ್ರಮೇಣ ಇದಕ್ಕೆ ಚಿನ್ನದ ಹಾಳೆಗಳು, ನವರತ್ನಗಳು ಮತ್ತು ಕಲಾತ್ಮಕ ಅಲಂಕಾರಗಳನ್ನು ಅಳವಡಿಸಿ ಭವ್ಯ ರೂಪ ನೀಡಲಾಗಿದೆ.

ವಿದ್ಯುತ್ ದೀಪಾಲಂಕಾರ:

ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ (ಅಇಖಅ) ವತಿಯಿಂದ ಮೈಸೂರು ನಗರದಲ್ಲಿ ಸುಮಾರು 130 ರಿಂದ 136 ಕಿಲೋ ಮೀಟರ್ ಉದ್ದದ ರಸ್ತೆಗಳಿಗೆ ವೈವಿಧ್ಯಮಯ ಹಾಗೂ ಆಕರ್ಷಕ ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತದೆ. ಇಡೀ ಮೈಸೂರು ನಗರವನ್ನು ಕಂಗೊಳಿಸುವಂತೆ ಮಾಡುವ ಈ ದೀಪಾಲಂಕಾರವು ನಗರದ ಸುಮಾರು 118 ಪ್ರಮುಖ ವೃತ್ತಗಳು ಮತ್ತು ಜಂಕ್ಷನ್ಗಳನ್ನು ಒಳಗೊಂಡಿರುತ್ತದೆ. ಇದರೊಂದಿಗೆ ಕರ್ನಾಟಕದ ಸಂಸ್ಕೃತಿ ಮತ್ತು ಸಾಧಕರನ್ನು ಬಿಂಬಿಸುವ 75ಕ್ಕೂ ಹೆಚ್ಚು ಕಲಾಕೃತಿಗಳನ್ನು ಎಲ್ಇಡಿ ದೀಪಗಳ ಮೂಲಕ ಪ್ರದರ್ಶಿಸಲಾಗುತ್ತದೆ. ದೇಶ ಹಾಗೂ ವಿದೇಶಗಳಿಂದ ಬರುವ ಪ್ರವಾಸಿಗರ ವೀಕ್ಷಣೆಗಾಗಿ ಈ ಅದ್ಭುತ ಬೆಳಕಿನ ಹಬ್ಬವನ್ನುಒಟ್ಟು 21 ದಿನಗಳ ಕಾಲ ಮುಂದುವರಿಸಲಾಗುತ್ತದೆ.

ಅರಮನೆ ದಸರಾ ಮತ್ತು ನಾಡಹಬ್ಬ ದಸರಾ

1969ರ ನಂತರ ಮೈಸೂರು ರಾಜ ಮನೆತನದ ಆಡಳಿತ ಅಂತ್ಯಗೊಂಡ ಹಿನ್ನೆಲೆಯಲ್ಲಿ ದಸರಾ ಆಚರಣೆಯಲ್ಲಿ ಮಹತ್ವದ ಬದಲಾವಣೆ ಉಂಟಾಯಿತು. ಪ್ರಸ್ತುತ ಮೈಸೂರಿನಲ್ಲಿ ದಸರಾ ಎರಡು ಪ್ರಮುಖ ರೂಪಗಳಲ್ಲಿ ನಡೆಯುತ್ತದೆ.

ಒಂದೆಡೆ ಅರಮನೆಯೊಳಗೆ ರಾಜಮನೆತನದ ಪರಂಪರೆಯನ್ನು ಮುಂದುವರೆಸಿಕೊಂಡು ಧಾರ್ಮಿಕ ಮತ್ತು ಸಾಂಪ್ರದಾಯಿಕ ಆಚರಣೆಗಳು ನಡೆಯುತ್ತವೆ. ಖಾಸಗಿ ದರ್ಬಾರ್, ಸರಸ್ವತಿ ಪೂಜೆ, ಆಯುಧ ಪೂಜೆ, ವಿಜಯದಶಮಿ, ಶಮೀಪೂಜೆ ಹಾಗೂ ಇತರ ಸಾಂಪ್ರದಾಯಿಕ ವಿಧಿ–ವಿಧಾನಗಳು ಇದರ ಭಾಗವಾಗಿವೆ. ಮತ್ತೊಂದೆಡೆ ಕರ್ನಾಟಕ ಸರ್ಕಾರವು ಸಾರ್ವಜನಿಕರಿಗಾಗಿ 'ನಾಡಹಬ್ಬ ದಸರಾ'ವನ್ನು ಆಯೋಜಿಸುತ್ತದೆ. ಜಂಬೂ ಸವಾರಿ, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ವಿವಿಧ ಸಾರ್ವಜನಿಕ ಕಾರ್ಯಕ್ರಮಗಳು ಇದರ ಪ್ರಮುಖ ಆಕರ್ಷಣೆಗಳಾಗಿವೆ. ಹೀಗಾಗಿ ಇಂದಿನ ಮೈಸೂರು ದಸರಾ ರಾಜಮನೆತನದ ಪರಂಪರೆ ಮತ್ತು ಆಧುನಿಕ ಸಾರ್ವಜನಿಕ ಉತ್ಸವದ ಸಮನ್ವಯವಾಗಿ ರೂಪುಗೊಂಡಿದೆ.

ಚಾಮುಂಡೇಶ್ವರಿ ಉತ್ಸವ ಮತ್ತು ಜಂಬೂ ಸವಾರಿ

ಮೈಸೂರು ದಸರಾ ಮತ್ತು ಆನೆಗಳ ನಡುವಿನ ಸಂಬಂಧವು ಬಹಳ ಹಳೆಯದು. ಒಡೆಯರ ಕಾಲದ ರಾಜವೈಭವದ ಮೆರವಣಿಗೆಗಳಿಂದ ಆರಂಭವಾದ ಈ ಪರಂಪರೆ, ಇಂದು ಸರ್ಕಾರದ ನೇತೃತ್ವದಲ್ಲಿ ನಡೆಯುವ ಜಂಬೂ ಸವಾರಿಯ ರೂಪದಲ್ಲಿ ಮುಂದುವರಿದಿದೆ. ಜಂಬೂ ಸವಾರಿ ಆರಂಭಕ್ಕೆ ಮುನ್ನ ಶುಭ ಕುಂಭ ಲಗ್ನದಲ್ಲಿ ಅರಮನೆಯ ಬಲರಾಮ ದ್ವಾರದಲ್ಲಿ ನಂದಿ ಧ್ವಜಕ್ಕೆ ಮೊದಲು ಪೂಜೆ ಸಲ್ಲಿಸಲಾಗುತ್ತದೆ. ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾಗಿ ಆಸೀನಳಾಗಿರುವ ತಾಯಿ ಚಾಮುಂಡೇಶ್ವರಿದೇವಿ ಮೂರ್ತಿಗೆ ಪುಷ್ಪಾರ್ಚನೆ ಸಲ್ಲಿಸಲಾಗುತ್ತದೆ. ಆ ಬಳಿಕ 24 ಕುಶಾಲ ತೋಪುಗಳ ಗೌರವವನ್ನು ಸಮರ್ಪಣೆ ಮಾಡಲಾಗುತ್ತದೆ. ಅಲ್ಲಿಂದ ಅರಮನೆ ಆವರಣದಲ್ಲಿ ವಿಜಯದಶಮಿಯ ಅತ್ಯಾಕರ್ಷಕ ಮೆರವಣಿಗೆಗೆ ಚಾಲನೆ ದೊರೆಯುತ್ತದೆ. ಜಂಬೂ ಸವಾರಿಯು ಅರಮನೆ ಆವರಣದಿಂದ ಬನ್ನಿ ಮಂಟಪದವರೆಗೆ ನಡೆಯುತ್ತದೆ. ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾದ ದೇವಿಚಾಮುಂಡೇಶ್ವರಿಯನ್ನು ಹೊತ್ತು 14 ಅಲಂಕೃತ ಗಜಗಳೊಂದಿಗೆ, ಜನಸಾಗರದೊಡನೆ ಧೀರ–ಗಂಭೀರ ನಡಿಗೆಯಲ್ಲಿ ಮೆರವಣಿಗೆಯಲ್ಲಿ ಸಾಗುವ ಗಜರಾಜನ ಠೀವಿಗೆ ಸರಿಸಾಟಿಯಿಲ್ಲ. ಭಾರತದ ಬೇರೆಲ್ಲೂ ದಸರಾ ಸಮಯದಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಆನೆಗಳು ಪಾಲ್ಗೊಳ್ಳುವುದಿಲ್ಲ. ಅಲಂಕಾರಕ್ಕೆ ಸಜ್ಜಾಗಿರುವ 80 ಕೆ.ಜಿ. ಚಿನ್ನದ 750 ಕೆ.ಜಿ. ತೂಕದ ಅಂಬಾರಿ ಹೊತ್ತ ಬಲರಾಮನ ಜತೆಗೆ ಪೊಲೀಸ್ ಬ್ಯಾಂಡ್ನ ಆಕರ್ಷಕ ತಾಳವಾದ್ಯ ಕಳೆಗಟ್ಟುತ್ತದೆ. ಅಲ್ಲದೆ, ಕಂಸಾಳೆ ಕುಣಿತ, ಕಲಾ ತಂಡಗಳ ನೃತ್ಯ ಪ್ರದರ್ಶನಗಳ ಜತೆಗೆ ರಾಜ್ಯದ ವಿವಿಧ ಜಿಲ್ಲೆಗಳ ಸಂಸ್ಕೃತಿ ಸಾರುವ ಸ್ತಬ್ಧಚಿತ್ರಗಳು ಎಲ್ಲರ ಗಮನ ಸೆಳೆಯುತ್ತದೆ. ಇದರ ವೀಕ್ಷಣೆಗೆ ಸಾವಿರಾರು ಸಂಖ್ಯೆಯಲ್ಲಿ ಜನರು ಸೇರುತ್ತಾರೆ...............................

....

ನಾಳೆಗೆ ಮುಂದುವರಿಯುತ್ತದೆ.

ಸಣ್ ಸುದ್ದಿ

ಗಣೇಶ್ ಪೆಂಡಾಲ್‌ನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಇಲ್ಲಿನ ವಿನಾಯಕ ನಗರದ ಶ್ರೀ ಸಿದ್ಧಿ ವಿನಾಯಕ ಸೇವಾ ಮಂಡಳಿಯ ಸುವರ್ಣ ಮಹೋತ್ಸವ ಮತ್ತು ಸ್ಮರಣ ಸಂಚಿಕೆ ಬಿಡುಗಡೆ ಕಾರ್ಯಕ್ರಮವನ್ನು ಅ. 11 ರಂದು ಆಯೋಜಿಸಲಾಗಿದೆ.

ಸುವರ್ಣ ಮಹೋತ್ಸವದ ಅಂಗವಾಗಿ ಸಿದ್ದಗಂಗಾ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಸಚಿ ಕಿಡ್ನಿ ಮತ್ತು ಮಲ್ಟಿ ಸ್ಪೆಷಾಲಿಟಿ ಹಾಸ್ಪಿಟಲ್, ಡಾ. ಅಗರ್ವಾಲ್ ಕಣ್ಣಿನ ಆಸ್ಪತ್ರೆ, ಶ್ರೀ ವೆಂಕಟೇಶ್ವರ ಆಸ್ಪತ್ರೆ ವತಿಯಿಂದ ಉಚಿತ ಕೀಲು ಮತ್ತು ಮೂಳೆ ತಪಾಸಣೆ ಇವರುಗಳ ಸಹಕಾರದೊಂದಿಗೆ ಬೆಳಗ್ಗೆ 8:30 ಕ್ಕೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಅಂದು ಸಂಜೆ 5–30ಕ್ಕೆ ನಡೆಯಲಿರುವ ಸುವರ್ಣ ಮಹೋತ್ಸವ ಮತ್ತು ಸ್ಮರಣ ಸಂಚಿಕೆ ಬಿಡುಗಡೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಸಿದ್ದಗಂಗಾ ಮಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿ ವಹಿಸುವರು. ಉದ್ಘಾಟನೆಯನ್ನು ನೊಣವಿನಕೆರೆಯ ಶ್ರೀ ಕಾಡಸಿದ್ದೇಶ್ವರ ಮಠದ ಶ್ರೀ ಕರಿವೃಷಭದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ ನೆರವೇರಿಸುವರು. ಸ್ಮರಣ ಸಂಚಿಕೆಯನ್ನು ಕೇಂದ್ರ ರೈಲ್ವೆ ಮತ್ತು ಜಲ ಶಕ್ತಿ ರಾಜ್ಯ ಸಚಿವರಾದ ವಿ.ಸೋಮಣ್ಣ ಬಿಡುಗಡೆಗೊಳಿಸುವರು. ಉಪಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರಾದ ಡಾ. ಜಿ ಪರಮೇಶ್ವರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಅತಿಥಿಗಳಾಗಿ ಮಾಜಿ ಸಂಸದರಾದ ಜಿ.ಎಸ್. ಬಸವರಾಜು, ನಗರ ಶಾಸಕರಾದ ಜಿ.ಬಿ. ಜ್ಯೋತಿಗಣೇಶ್, ಬೆಂಗಳೂರಿನ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಡಾ. ಸಿ.ಸೋಮಶೇಖರ್, ಸ್ಮರಣ ಸಂಚಿಕೆ ಸಮಿತಿ ಅಧ್ಯಕ್ಷರಾದ ಜಗಜ್ಯೋತಿ ಸಿದ್ದರಾಮಯ್ಯ, ಹೆಚ್.ಆರ್. ನಾಗೇಶ್ ಪಾಲ್ಗೊಳ್ಳುವರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಸಿದ್ಧಿವಿನಾಯಕ ಸೇವಾ ಮಂಡಳಿಯ ಅಧ್ಯಕ್ಷರಾದ ಪ್ರಭು ಎಸ್.ಬಿ. ವಹಿಸುವರು. ಈ ಕಾರ್ಯಕ್ರಮದಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಆಡಳಿತ ಮಂಡಳಿಯುವರು ಮನವಿ ಮಾಡಿದ್ದಾರೆ. ನಂತರ ಸಂಜೆ 7 ರಿಂದ ಸಂಗೀತ್ ಸ್ಕೂಲ್ ಆಫ್ ಮ್ಯೂಸಿಕ್ ರವರಿಂದ ಆರ್ಕೆಸ್ಟ್ರಾ ಹಾಗೂ ನೃತ್ಯ ಕಾರ್ಯಕ್ರಮ ನಡೆಯಲಿದೆ.

ಚಿಕಿತ್ಸೆ ಫಲಕಾರಿಯಾಗದೆ ಅಪರಿಚಿತ ಮಹಿಳೆ ಸಾವು

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಕ್ಯಾತ್ಸಂದ್ರ ಪೊಲೀಸ್ ಠಾಣೆ ವ್ಯಾಪ್ತಿ ತಿಮ್ಮನಾಯಕನಹಳ್ಳಿ ಗ್ರಾಮದಲ್ಲಿ ಅಸ್ವಸ್ಥಗೊಂಡಿದ್ದ ಸುಮಾರು 60 ವರ್ಷದ ಅಪರಿಚಿತ ಮಹಿಳೆಯನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೆ ಅಪರಿಚಿತ ಮಹಿಳೆಯು ಸೆಪ್ಟೆಂಬರ್ 30ರಂದು ಮೃತಪಟ್ಟಿರುತ್ತಾಳೆ. ವಾರಸುದಾರರು ಯಾರೆಂದು ತಿಳಿದು ಬಂದಿರುವುದಿಲ್ಲ.

ಮೃತಳು 5 ಅಡಿ ಎತ್ತರ, ದುಂಡು ಮುಖ, ಬಲಮೊಣಕಾಲಿನ ಮೇಲೆ ಹಳೆ ಗಾಯದ ಮಚ್ಚೆ ಇರುತ್ತದೆ. ಈಕೆಯ ಮೈಮೇಲೆ ಮಾಸಲು ಕೆಂಪು ಮತ್ತು ಹಸಿರು ಹೂಗಳಿರುವ ಹಸಿರು ಬಣ್ಣದ ನೈಟಿ ಇರುತ್ತದೆ.

ಮೃತಳ ವಾರಸುದಾರರು ಯಾರಾದರೂ ಇದ್ದಲ್ಲಿ ಕೂಡಲೇ ಹತ್ತಿರದ ಪೊಲೀಸ್ ಠಾಣೆಯನ್ನು ಸಂಪರ್ಕಿಸಬೇಕೆಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮನವಿ ಮಾಡಿದ್ದಾರೆ.

ತುಮಕೂರು ಜಿಲ್ಲೆಯ ಹಾಸ್ಟೆಲ್‌ಗಳಲ್ಲಿ ಭಾರೀ ಅವ್ಯವಸ್ಥೆ:

ವಾರ್ಡನ್ ಹಾಗೂ ಅಧಿಕಾರಿಗಳಿಗೆ ರಾಜ್ಯ ಆಹಾರ ಆಯೋಗದ ಖಡಕ್ ಎಚ್ಚರಿಕೆ!

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಜಿಲ್ಲೆಯ ವಿವಿಧ ಹಾಸ್ಟೆಲ್‌ಗಳಲ್ಲಿ (ವಿದ್ಯಾರ್ಥಿ ನಿಲಯ) ಹಲವಾರು ನ್ಯೂನತೆಗಳು ಕಂಡುಬಂದ ಹಿನ್ನೆಲೆಯಲ್ಲಿ, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ವಾರ್ಡನ್‌ಗಳಿಗೆ ಕರ್ನಾಟಕ ರಾಜ್ಯ ಆಹಾರ ಆಯೋಗವು ಬಿಸಿ ಮುಟ್ಟಿಸಿದೆ.

ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ದಿನಾಂಕ 24.09.2026 ಮತ್ತು 25.09.2026 ರಂದು ತುಮಕೂರು ಜಿಲ್ಲೆಯ ವಿವಿಧ ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಕಟ್ಟುನಿಟ್ಟಿನ ಪರಿಶೀಲನೆ ನಡೆಸಿದ್ದರು. ಈ ಪರಿಶೀಲನೆಯ ವೇಳೆ ವಿದ್ಯಾರ್ಥಿ ನಿಲಯಗಳ ನಿರ್ವಹಣೆಯಲ್ಲಿ ಹಲವಾರು ನ್ಯೂನತೆಗಳು ಹಾಗೂ ಲೋಪದೋಷಗಳು ಆಯೋಗದ ಗಮನಕ್ಕೆ ಬಂದಿವೆ.

ಈ ಗಂಭೀರ ವಿಚಾರವನ್ನು ಪರಿಗಣಿಸಿರುವ ಆಯೋಗವು, ಈ ನ್ಯೂನತೆಗಳ ಕುರಿತು ವಿಚಾರಣೆ ಹಮ್ಮಿಕೊಂಡಿದೆ. ಈ ಕುರಿತಂತೆ ತುಮಕೂರು ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಿಗೆ ಪತ್ರ



ಮುಖೇನ ಎಚ್ಚರಿಕೆ ನೀಡಲಾಗಿದೆ.

ವಿಚಾರಣೆಗೆ ಖುದ್ದಾಗಿ ಹಾಜರಾಗಲು ಸೂಚನೆ: ನ್ಯೂನತೆಗಳು ಕಂಡುಬಂದಿರುವ ಹಾಸ್ಟೆಲ್‌ಗಳ ಸಹಾಯಕ ನಿರ್ದೇಶಕರು ಹಾಗೂ ವಾರ್ಡನ್‌ಗಳು ಖುದ್ದಾಗಿ ಆಯೋಗದ ಮುಂದೆ ಹಾಜರಾಗಿ ತಮ್ಮ ಹೇಳಿಕೆ ಅಥವಾ ಸಮಜಾಯಿಷಿಯನ್ನು ದೃಢೀಕರಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಒಂದು ವೇಳೆ ಸಮರ್ಪಕ ಉತ್ತರ ನೀಡಲು ತಪ್ಪಿದಲ್ಲಿ ಅಥವಾ ಗೈರಾದಲ್ಲಿ, ಅಂತಹವರ ವಿರುದ್ಧ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದು ಆಯೋಗದ ಅಧ್ಯಕ್ಷರು ಎಚ್ಚರಿಕೆ ನೀಡಿದ್ದಾರೆ.

ಪರಿಶೀಲನೆಗೆ ಒಳಗಾದ ಪ್ರಮುಖ ಹಾಸ್ಟೆಲ್‌ಗಳು: ಆಯೋಗವು ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ಒಟ್ಟು 12 ಹಾಸ್ಟೆಲ್‌ಗಳ ಹೆಸರುಗಳನ್ನು ಉಲ್ಲೇಖಿಸಲಾಗಿದೆ.

ತುಮಕೂರು ನಗರದ ರಾಧಾಕೃಷ್ಣನ್ ರಸ್ತೆ, ಬೆಳಗುಂಬ ರಸ್ತೆ ಹಾಗೂ ಎಂ.ಜಿ ರಸ್ತೆಯಲ್ಲಿರುವ ಡಾ॥ ಬಿ.ಆರ್ ಅಂಬೇಡ್ಕರ್ ಮೆಟ್ರಿಕ್ ಪೂರ್ವ ಹಾಗೂ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳು ಇದರಲ್ಲಿ ಸೇರಿವೆ.

ಇದರ ಜೊತೆಗೆ ಕೊರಟಗೆರೆ ಪಟ್ಟಣದಲ್ಲಿರುವ ಡಿ. ದೇವರಾಜು ಅರಸು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಬಾಲಕ/ಬಾಲಕಿಯರ ವಸತಿ ನಿಲಯಗಳು ಸಹ ಈ ಪಟ್ಟಿಯಲ್ಲಿವೆ.

ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಆದೇಶವನ್ನು ಕರ್ನಾಟಕ ರಾಜ್ಯ ಆಹಾರ ಆಯೋಗದ ಸದಸ್ಯ ಕಾರ್ಯದರ್ಶಿಗಳು ಅಕ್ಟೋಬರ್ 06, 2026 ರಂದು ಹೊರಡಿಸಿದ್ದಾರೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ವಿದ್ಯಾರ್ಥಿಗಳಿಗೆ ವೈಟ್ ಕೋಟ್ ಸಮವಸ್ತ್ರಧಾರಣೆ ಸಮಾರಂಭ–2026

ಡ್ರಗ್ ಹಾವಳಿ ನಿರ್ಮೂಲನೆಗೆ ವಿದ್ಯಾರ್ಥಿಗಳೇ ಮೊದಲ ರಕ್ಷಕರು: ಗೋಪಾಲ್

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಡ್ರಗ್ಸ್ ಹಾವಳಿ ವಿರುದ್ಧದ ಹೋರಾಟಕ್ಕೆ ವಿದ್ಯಾರ್ಥಿಗಳೇ, ಮೊದಲ ರಕ್ಷಕರಾಗಬೇಕು ಎಂದು ತುಮಕೂರು ಜಿಲ್ಲಾ ಹೆಚ್ಚುವರಿ ಪೋಲೀಸ್ ವರಿಷ್ಠಾಧಿಕಾರಿ ಸಿ.ಗೋಪಾಲ್ ರವರು ಹೇಳಿದ್ದಾರೆ.

ನಗರದ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ ಅ.7 ರಂದು ಬುಧವಾರ ಬೆಳಿಗ್ಗೆ 11 ಗಂಟೆಗೆ ನೂತನವಾಗಿ ಪ್ರವೇಶ ಪಡೆದಿರುವ 2026–27ನೇ ಸಾಲಿನ ಪ್ರಥಮ ವರ್ಷದ ವೈದ್ಯಕೀಯ ವಿದ್ಯಾರ್ಥಿಗಳಿಗೆ ವೈದ್ಯ ವೃತ್ತಿಯ ಸಂಕೇತವಾಗಿರುವ ಬಿಳಿವರ್ಣದ ಸಮ ವಸ್ತ್ರಧಾರಣೆ (White coat Ceremony) ಸಮಾರಂಭವನ್ನು ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಆಡಿಟೋರಿಯಂನಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯ ಕ್ರಮವನ್ನು ಉದ್ಘಾಟಿಸಿದ್ದ ಗೋಪಾಲ್ ರವರು ಮಾತನಾಡುತ್ತಾ ಸಮಾಜದಲ್ಲಿ ಹೆಚ್ಚುತ್ತಿರುವ ಡ್ರಗ್ ಹಾವಳಿ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ವೈದ್ಯಕೀಯ ಕ್ಷೇತ್ರದವರು ಈ ವ್ಯಸನದಿಂದ ಹೊರತಾಗಿಲ್ಲ. ಮಾದಕ ವ್ಯಸನ ವಿರುದ್ಧದ



ಹೋರಾಟದಲ್ಲಿ ವಿದ್ಯಾರ್ಥಿಗಳು ಮೊದಲ ಸಾಲಿನ ರಕ್ಷಕರಾಗಬೇಕು ಎಂದು ಸಲಹೆ ಮಾಡಿದರು. ಆರೋಗ್ಯವಂತ ಸಮಾಜ ನಿರ್ಮಾಣವೇ ತುಮಕೂರು ಪೋಲೀಸ್ ಮತ್ತು ಶ್ರೀದೇವಿ ವೈದ್ಯಕೀಯ ಕಾಲೇಜಿನ ಗುರಿಯಾಗಿದ್ದು, ಈ ನಿಟ್ಟಿನಲ್ಲಿ ಕರ್ನಾಟಕವನ್ನು ಮಾದಕ ವ್ಯಸನ ಮುಕ್ತ ರಾಜ್ಯವನ್ನಾಗಿ ಮಾಡಲು ಕಾಲೇಜಿನ ಜೊತೆ ಒಪ್ಪಂದ ಮಾಡಿ ಕೊಳ್ಳಲಾಗುತ್ತಿದೆ. ವಿದ್ಯಾರ್ಥಿ ಪೋಲೀಸ್ ಮಾರ್ಷಲ್ ಮತ್ತು ಕರ್ನಾಟಕ ಪೋಲೀಸ್ ಇಲಾಖೆ ಜಂಟಿ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಶ್ರೀಘವೇ ಇದಕ್ಕೆ ಅಂತಿಮ ಸ್ವರೂಪ ನೀಡಲಾಗುವುದು ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ವೈದ್ಯ ವಿದ್ಯಾರ್ಥಿ ಪ್ರತಿಜ್ಞಾ ವಿಧಿ ಬೋಧಿಸಿದ ಶ್ರೀದೇವಿ ವೈದ್ಯಕೀಯ ನಿರ್ದೇಶಕ ಡಾ.ರಮಣ್ ಎಂ ಹುಲಿನಾಯ್ಕರ್ ಮಾತನಾಡಿ, ಪ್ರೀತಿ ಮತ್ತು ಸಹಾನುಭೂತಿ ವೈದ್ಯರಿಗೆ ಇರಬೇಕಾದ ಮೊದಲನೇ ಗುಣ ಎಂಬುದನ್ನು ಅರ್ಥಮಾಡಿ ಕೊಳ್ಳಬೇಕು ಎಂದು ಒತ್ತಿ ಹೇಳಿದರು. ರಾಷ್ಟ್ರೀಯ ವೈದ್ಯಕೀಯ ಆಯೋಗ ಪ್ರತಿ ಪಾದಿಸಿರುವ 7 ಪ್ರಮುಖ ಅಂಶಗಳಾದ ವೈದ್ಯ, ನಾಯಕ, ಸಂವಹನಾಕಾರ, ಜೀವಮಾನ, ಕಲಿಯುವವ, ವೃತ್ತಿಪರ, ವಿಮಾರ್ಶಾತ್ಮಕ, ಚಿಂತಕ ಮತ್ತು ಸಂಶೋಧಕ ವಿಷಯಗಳ ಬಗ್ಗೆ ಪ್ರಸ್ತಾಪಿಸಿದರು. ಒಬ್ಬ ಪರಿಪೂರ್ಣ ವೈದ್ಯರಾಗಲು ಕಾಲೇಜಿಗೆ ಹೊಂದಿಕೊಂಡಂತೆ ಸಾವಿರ ಬೆಡ್ ಆಸ್ಪತ್ರೆಯಿದೆ. ಕಲಿಕೆಗೆ ಉತ್ತಮ ಪರಿಸರವಿದೆ ಇದನ್ನು ಉಪಯೋಗಿಸಿ ಕೊಳ್ಳಬೇಕು ಎಂದರು.

ಕಾರ್ಯ ಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿ ನಾಯ್ಕರ್ ರವರು ಮಾತನಾಡುತ್ತಾ, ಒಬ್ಬ ವೈದ್ಯರನ್ನು ತಯಾರು ಮಾಡಲು ಸರ್ಕಾರ 25–30 ಲಕ್ಷ ರೂಪಾಯಿ ವೆಚ್ಚ ಮಾಡುತ್ತದೆ. ಇದನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಅರಿಯಬೇಕು. ಹಣ ಮತ್ತು ಹೆಸರು ಗಳಿಸುವುದೇ ವೈದ್ಯರ ಗುರಿಯಾಗ ಬಾರದು. ರೋಗಿಗಳ ಸೇವೆಯೇ ನಿಜವಾದ ಮಾನವೀಯ ಸೇವೆ ಎಂಬದನ್ನು ಅರ್ಥ ಮಾಡಿ ಕೊಂಡು ಜೀವನ ಪೂರ್ತಿ ಕಲಿಯುವ ಮನೋಭಾವ ಬೆಳಸಿ ಕೊಳ್ಳಬೇಕು ಎಂದರು.

ಕಾರ್ಯ ಕ್ರಮದಲ್ಲಿ ಗೌರವ ಅತಿಥಿಗಳಾಗಿ ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರ ಜ್ಞಾನ ನಿರ್ದೇಶಕರಾದ ಎಂ.ಎಸ್.ಪಾಟೀಲ್ ರವರು ಮಾತನಾಡುತ್ತಾ ರಾಜೀವ್ ಗಾಂಧಿ ಆರೋಗ್ಯ ವಿಶ್ವ ವಿದ್ಯಾಲಯ ವೈದ್ಯಕೀಯ ವಲಯದಲ್ಲಿ ಉತ್ತಮ ಸಾಧನೆ ಮಾಡುವ ಕಾಲೇಜುಗಳಿಗೆ, ವಿದ್ಯಾರ್ಥಿಗಳಿಗೆ ಧನ ಸಹಾಯ ಮಾಡುತ್ತಿದ್ದು, ಅದನ್ನು ಗಳಿಸುವ ಕಡೆಗೆ ನಿಮ್ಮ ಗಮನ ಇರಬೇಕು. ಕಾಲೇಜಿನಲ್ಲಿ ಉತ್ತಮ ಮೂಲ ಸೌಕರ್ಯ ಒದಗಿಸಲಾಗಿದೆ. ತಂದೆ– ತಾಯಿಯವರ ಕನಸು ಮತ್ತು ಸಮಾಜದ ಕನಸನ್ನು ನನಸು ಮಾಡಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಆಸ್ಪತ್ರೆಯ ಮುಖ್ಯ ಆಡಳಿತಾಧಿಕಾರಿ ಡಾ. ಪ್ರದೀಪ್‌ಕುಮಾರ್ ವೇಗಿ ಅವರಿಗೆ "ಪ್ರತಿಷ್ಠಿತ ಕಲಾಂ ಮೆಡಲ್ ಆಫ್ ಎಕ್ಸ್‌ಲೆನ್ಸ್ ಇನ್ ಬಯೋಮೆಡಿಕಲ್ ಅಡ್ವಾನ್ಸ್"– 2026 ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜೀನೋ ಮಿಕ್ ಸಂಶೋಧನೆ, ಆಣ್ವಿಕ ಜೀವ ಶಾಸ್ತ್ರ ಹಾಗೂ ಅನುವಾದಾತ್ಮಕ ಆರೋಗ್ಯ ಕ್ಷೇತ್ರಗಳಿಗೆ ನೀಡಿರುವ ಮಹತ್ವದ ಕೊಡುಗೆಗಾಗಿ ಈ ಗೌರವ ಸಂದಿದೆ.

ಸಮಾರಂಭದಲ್ಲಿ ಶ್ರೀದೇವಿ ಚಾರಿಟಬಲ್ ಟ್ರಸ್ಟಿ ಹಾಗೂ ನೇತ್ರ ತಜ್ಞೆ ಡಾ.ಲಾವಣ್ಯ, ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಎಲ್. ಹರೇಂದ್ರಕುಮಾರ್, ವೈದ್ಯಕೀಯ ಅಧೀಕ್ಷಕ ಡಾ.ಮಂಜುನಾಥ್ ಜೆ.ವಿ., ಉಪಪ್ರಾಂಶುಪಾಲೆ ಡಾ.ರೇಖಾಗುರು ಮೂರ್ತಿ, ಆಡಳಿತ ವಿಭಾಗದ ಉಪ ಪ್ರಾಂಶುಪಾಲ ಡಾ.ಎಂ. ಎನ್.ಹೇಮಂತ್‌ರಾಜ್ ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರು, ಪೋಷಕರು ಉಪಸ್ಥಿತರಿದ್ದರು.



ರಾಜ್ಯ ವಿಧಾನ ಪರಿಷತ್ ಆಗ್ನೇಯ ಪದವೀಧರ ಕ್ಷೇತ್ರದ ಚುನಾವಣಾ –2026ರ ಸ್ವತಂತ್ರ ಸ್ಪರ್ಧಾ ಆಕಾಂಕ್ಷಿ ಯಾದ ಕೆ.ಜಿ.ರಂಗಸ್ವಾಮಿ (ರಂಗಸ್ವಾಮಿಗೌಡರು) ಇಂದು ನಾಮಪತ್ರವನ್ನು ಸಹಾಯಕ ಚುನಾವಣಾಧಿಕಾರಿ ಜಿ.ಪ್ರಭುರವರಿಗೆ ತಮ್ಮ ಅಪಾರ ಬೆಂಬಲಿಗರೊಂದಿಗೆ ಆಗಮಿಸಿ ಸಲ್ಲಿಸಿದರು.



ತುಮಕೂರಿನ ಶ್ರೀಕೃಷ್ಣ ಮಂದಿರದಲ್ಲಿ ಯಕ್ಷಗಾನ ಸಾಂಸ್ಕೃತಿಕ ವೇದಿಕೆಯ ಪ್ರಧಾನ ಸಂಚಾಲಕ ರಾದ ನಾಗರಾಜ ಧನ್ಯ ಮತ್ತು ಅನಂತ ರಾವ್ ರವರು ಕಳೆದ ಹದಿನಾರು ವರ್ಷ ಗಳಿಂದ ಯಕ್ಷ ಸಂಘಟನೆಯ ಸೇವೆಯನ್ನು ಪ್ರಶಂಸಿಸಿ ಸುದರ್ಶನ ವಿಜಯ ಯಕ್ಷಗಾನ ಸಂದರ್ಭದಲ್ಲಿ ಗೌರವಿಲಾಯಿತು.



ತುಮಕೂರು ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿ.ಪಂ., ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ, ಕರ್ನಾಟಕ ಅಥ್ಲೆಟಿಕ್ ಸಂಸ್ಥೆ ಹಾಗೂ ಜಿಲ್ಲಾ ಅಥ್ಲೆಟಿಕ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ರಾಜ್ಯ ಕಿರಿಯ ಅಥ್ಲೆಟಿಕ್ ಕ್ರೀಡಾಕೂಟ ನಡೆಯಿತು.



ತುಮಕೂರು ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿ.ಪಂ., ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ, ಕರ್ನಾಟಕ ಅಥ್ಲೆಟಿಕ್ ಸಂಸ್ಥೆ ಹಾಗೂ ಜಿಲ್ಲಾ ಅಥ್ಲೆಟಿಕ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ರಾಜ್ಯ ಕಿರಿಯ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಬಾಲಕಿಯರ ವಿಭಾಗದ 100 ಮೀಟರ್ ಓಟದಲ್ಲಿ ಉಡುಪಿಯ ಶ್ರುತಿ ಪಿ. ಶೆಟ್ಟಿ, ಚಿನ್ನದ ಪದಕ ಗೆದ್ದಿದ್ದಾರೆ. ಮೈಸೂರಿನ ಲೇಖನ್ ಎಸ್. ಪ್ರಸಾದ್ ಬೆಳ್ಳಿ ಪದಕ, ಉಡುಪಿಯ ಅನುಷಾ ಜಿ. ನಾಯಕ್ ಕಂಚಿನ ಪದಕ ಗೆದ್ದಿದ್ದಾರೆ. ಜಿಲ್ಲಾ ಅಥ್ಲೆಟಿಕ್ ಸಂಸ್ಥೆಯ ಪ್ರಭಾಕರ್, ದೈಹಿಕ ಶಿಕ್ಷಣ ಉಪನ್ಯಾಸಕರ ಸಂಘದ ರಾಜ್ಯಾಧ್ಯಕ್ಷ ಬಸವರಾಜು, ದೈ. ಶಿಕ್ಷಕ ಅನಿಲ್‌ಕುಮಾರ್ ಪದಕ ವಿತರಿಸಿದರು.

ಸ್ವಚ್ಛತಾ ಹೀ ಸೇವಾ–2026



ಅತ್ತಿಬೆಲೆ (ಆನೇಕಲ್) : ಇಲ್ಲಿನ ಪುರಸಭೆ ವತಿಯಿಂದ ಸ್ವಚ್ಛತಾ ಹೀ ಸೇವಾ–2026 ಕಾರ್ಯಕ್ರಮದ ಪ್ರಯುಕ್ತ ಅಂತರ್ ಶಾಲಾ ಸ್ಪರ್ಧೆಗಳನ್ನು ಆಯೋಜಿಸಿ ಬಹುಮಾನ ವಿತರಿಸಿದರು.

ವಿದ್ಯಾರ್ಥಿಗಳಿಗೆ ರಸಪ್ರಶ್ನೆ, ಚಿತ್ರಕಲೆ ಸೇರಿದಂತೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿದ್ದರು. ವಿವಿಧ ಶಾಲೆಗಳ ವಿದ್ಯಾರ್ಥಿಗಳು ಅತ್ತಿಬೆಲೆಯಲ್ಲಿ ಬೃಹತ್ ಜಾಥ ನಡೆಸಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಿದರು. ಸರ್ಕಾರಿ ಬಾಲಕಿಯರ ಶಾಲೆ, ಸರ್ಕಾರಿ ಉರ್ದು ಶಾಲೆ, ಸರ್ಕಾರಿ ಬಾಲಕರ ಶಾಲೆ ಸೇರಿದಂತೆ ಶಾಲೆಗಳ ವಿದ್ಯಾರ್ಥಿಗಳು ಭಾಗಿಯಾಗಿದ್ದರು.

ಪುರಸಭಾ ಮುಖ್ಯಾಧಿಕಾರಿ ದೊಡ್ಡಮಲವಯ್ಯ ಮಾತನಾಡಿ ಸಾರ್ವಜನಿಕರಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಲು ವಿವಿಧ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಎಲ್ಲಂದರಲ್ಲಿ ಕಸ ಎಸೆಯುವವರ ವಿರುದ್ಧ ಕ್ರಮ ವಹಿಸಲಾಗಿದೆ. ಸಾರ್ವಜನಿಕರು ಪ್ಲಾಸ್ಟಿಕ್ ಚೀಲಗಳಿಗೆ ಬದಲಾಗಿ ಬಟ್ಟೆ ಚೀಲ ಬಳಸಬೇಕು, ಸಾರ್ವಜನಿಕರು ತಮ್ಮ ಮನೆಯಲ್ಲಿನ ಹಳೇ ಬಟ್ಟೆ, ಹಳೇ ಚಪ್ಪಲಿ ಅಥವಾ ಅಟಿಕೆ ವಸ್ತುಗಳನ್ನು ಪುರಸಭೆ ಬಳಿಯಿರುವ ಆಯುರ್ ಕೇಂದ್ರಕ್ಕೆ ನೀಡಿ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದರು. ಪುರಸಭಾ ಪರಿಸರ ಅಭಿಯಂತರರಾದ ಯಾಸ್ಮೀನಾ ತಾಜ್ ಇದ್ದರು.

ರಾಮನಗರದಲ್ಲಿ ಜ್ಞಾನೇಶ್ ಕುಮಾರ್ ಬಂಧನಕ್ಕೆ ಆಗ್ರಹಿಸಿ ಕಾಂಗ್ರೆಸ್ ಪಕ್ಷದಿಂದ ಪ್ರತಿಭಟನೆ

ರಾಮನಗರ : ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಚುನಾವಣಾ ಅಕ್ರಮ ನಡೆಸಿದ ಆರೋಪದಡಿ ಬಂಧಿಸಿ ವಿಚಾರಣೆ ನಡೆಸಬೇಕು ಎಂದು ಆಗ್ರಹಿಸಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ವೆಂಕಟೇಶ್ ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.



ನಗರದ ಬಿಎಂ ರಸ್ತೆಯಲ್ಲಿನ ಕಾಂಗ್ರೆಸ್ ಕಚೇರಿ ಎದುರು ವೆಂಕಟೇಶ್ ನೇತೃತ್ವದಲ್ಲಿ ಜಮಾವಣೆಗೊಂಡ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ನಡೆಸಿದರು. ಐಜೂರು ಸರ್ಕಲ್ ಮೂಲಕ ಕೆಂಗಲ್ ವೃತ್ತದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಪ್ರತಿಕೃತಿ ದಹಿಸಿ, ಕೇಂದ್ರ ಸರ್ಕಾರ, ಪ್ರಧಾನಿ ಮೋದಿ ಹಾಗೂ ಚುನಾವಣಾ ಆಯೋಗದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ವೆಂಕಟೇಶ್ ಮಾತನಾಡಿ, ಆಯುಕ್ತ ಜ್ಞಾನೇಶ ಕುಮಾರ್ ಅವರು ಏಕಪಕ್ಷೀಯವಾಗಿ ನಿರ್ಧಾರ ಕೈಗೊಳ್ಳುತ್ತಿದ್ದಾರೆ. ಈ ಬಗ್ಗೆ ಸ್ವತಃ ಸುಪ್ರೀಂ ಕೋರ್ಟ್ ಸ್ಪಷ್ಟೀಕರಣ ಕೇಳಿದೆ. ಇದು ದೇಶದ ನಾಗರಿಕರ ಮತದಾನದ ಹಕ್ಕಿಗೆ ಸಂಬಂಧಿಸಿದ ಗಂಭೀರ ವಿಚಾರವಾಗಿದೆ. ಚುನಾವಣಾ ಆಯೋಗವನ್ನು ಬಿಜೆಪಿ ಕೈಗೊಂಬೆಯಾಗಿ ಮಾಡಿಕೊಂಡಿದೆ. ಹೀಗಾಗಿ ಈ ಕೂಡಲೇ ಜ್ಞಾನೇಶ್ ಕುಮಾರ್ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಮತದಾರರ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ನೆಪದಲ್ಲಿ ರಾಜ್ಯದಲ್ಲಿ ಕೋಟಿಗೂ ಹೆಚ್ಚು ಮತದಾರರ ಹಕ್ಕು ಕಸಿಯುವ ಪ್ರಯತ್ನ ನಡೆಯುತ್ತಿದೆ. ಅರ್ಹ ಮತದಾರರ ಹಕ್ಕುಗಳಿಗೆ ಧಕ್ಕೆಯಾಗದಂತೆ ಎಸ್‌ಐಆರ್ ಪ್ರಕ್ರಿಯೆಯನ್ನು ನಡೆಸಬೇಕಿದ್ದ ಚುನಾವಣಾ ಆಯೋಗ ಬಿಜೆಪಿ ಪಕ್ಷದ ಏಜೆನ್ಸಿ ರೀತಿ ವರ್ತಿಸುತ್ತಿದೆ. ಇದರಿಂದಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಆಗಲಿದೆ. ಜ್ಞಾನೇಶ್ ಕುಮಾರ್ ಏಕಪಕ್ಷೀಯ ನಿರ್ಧಾರಗಳನ್ನು ಕೈಗೊಂಡು ಚುನಾವಣಾ ವ್ಯವಸ್ಥೆಗೆ ಧಕ್ಕೆಯುಂಟು ಮಾಡಿದ್ದಾರೆ ಎಂದು ಕಿಡಿಕಾರಿದರು.

ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ಘಟಕದ ಅಧ್ಯಕ್ಷ ಪುಟ್ಟರಾಜು ಮಾತನಾಡಿ, ಮುಖ್ಯ ಚುನಾವಣಾ ಆಯುಕ್ತರು ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಸೂಚನೆಯಂತೆ ನಡೆದುಕೊಳ್ಳುತ್ತಿರುವುದು ನಾಚಿಕೆಗೇಡು.

ಇಡೀ ದೇಶದಲ್ಲೇ 13ಕೋಟಿಗೂ ಹೆಚ್ಚು ಮತದಾರರ ಹಕ್ಕನ್ನು ಕಸಿದು ಮತದಾನ ಪಟ್ಟಿಯಿಂದ ಕೈಬಿಡಲಾಗಿದೆ. ಆಯೋಗವನ್ನು ಬಳಸಿಕೊಂಡು ಬಿಜೆಪಿ ಚುನಾವಣೆಗಳನ್ನು ಗೆಲ್ಲಲು ಹೊರಟಿದೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಬಿಜೆಪಿ–ಆರ್‌ಎಸ್‌ಎಸ್ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದಾರೆ. ಈ ಕೂಡಲೇ ಅವರನ್ನು ಬಂಧಿಸುವಂತೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಹಾಗೂ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ರಾಜು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಧ್ಯಕ್ಷ ಗಾಣಕಲ್ ನಟರಾಜ್, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಚೇತನ್ ಕುಮಾರ್, ಕಾರ್ಮಿಕ ಘಟಕದ ರಾಜ್ಯ ಕಾರ್ಯದರ್ಶಿ ಬಸವರಾಜು, ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಹೆಚ್. ರಾಜು, ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ, ಸದಸ್ಯರಾದ ಅಜ್ಮತ್, ನಿಜಾಮುದ್ದೀನ್, ವಿಜಯಕುಮಾರಿ, ಆಯಿಷಾ ಬಾನು, ಪಾರ್ವತಮ್ಮ, ನಾಗಮ್ಮ, ಮುಖಂಡರಾದ ಪುಟ್ಟಣ್ಣ, ಪ್ರಮೋದ್, ಗುರುಪ್ರಸಾದ್, ಸೋಮಶೇಖರ್, ಅಶ್ವಥ್ ಜಯಲಕ್ಷ್ಮಮ್ಮ, ದೇವರಾಜು, ಆರೀಫ್ ಉಲ್ಲಾ, ಭೂಷಣ್, ಶಿವಶಂಕರ್, ಗುಡ್ಡೇ ವೆಂಕಟೇಶ್ ಸೇರಿದಂತೆ ಹಲವರಿದ್ದರು.

ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲಿನ ಜನರ ವಿಶ್ವಾಸಕ್ಕೆ ಧಕ್ಕೆ ಉಂಟಾಗದಂತೆ ಚುನಾವಣಾ ಆಯೋಗ ಕಾರ್ಯನಿರ್ವಹಿಸಬೇಕು. ಮತದಾರರ ಹಕ್ಕುಗಳಿಗೆ ಧಕ್ಕೆ ತರುವ ಯಾವುದೇ ಕ್ರಮವನ್ನು ಕಾಂಗ್ರೆಸ್ ಸಹಿಸುವುದಿಲ್ಲ. ಜ್ಞಾನೇಶ್ ಕುಮಾರ್ ಬಿಜೆಪಿ ಸದಸ್ಯರಂತೆ ವರ್ತಿಸುತ್ತಿದ್ದಾರೆ. ತಕ್ಷಣವೇ ಅವರನ್ನು ಬಂಧಿಸಿ ವಿಚಾರಣೆ ನಡೆಸಬೇಕು. ಅಗತ್ಯವಿದ್ದಲ್ಲಿ ಈ ವಿಚಾರವಾಗಿ ರಾಜ್ಯ ಹಾಗೂ ದೇಶದಾದ್ಯಂತ ಹೋರಾಟ ತೀವ್ರಗೊಳಿಸಲಾಗುವುದು.

25 ವರ್ಷಗಳ ಸಾರ್ವಜನಿಕ ಸೇವೆ, ದೇಶದ ಅಭಿವೃದ್ಧಿಗಾಗಿ ನಿರಂತರ ಪರಿಶ್ರಮ

ರಾಮನಗರ : ಪ್ರಧಾನಿ ನರೇಂದ್ರ ಮೋದಿ ಅವರ 25 ವರ್ಷಗಳ ಸಾರ್ವಜನಿಕ ಸೇವೆ, ದೇಶದ ಅಭಿವೃದ್ಧಿಗಾಗಿ ನಿರಂತರ ಪರಿಶ್ರಮ ಹಾಗೂ ಅಚಲ ಸಂಕಲ್ಪ ಆದರ್ಶಪ್ರಾಯವಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್.ಮಂಜುನಾಥ್ ಅಭಿಪ್ರಾಯಪಟ್ಟರು.



ನಗರದ ಆರ್.ವಿ.ಸಿ.ಎಸ್ ಕಲ್ಯಾಣ ಮಂಟಪದಲ್ಲಿ ಬುಧವಾರ ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ನಡೆದ ಘಟಕದ ವತಿಯಿಂದ 'ಸೇವಾ ಸಂಕಲ್ಪ ಅಭಿಯಾನ ಅಂಗವಾಗಿ ಸೇವಾ ಜ್ಯೋತಿ ಯಾತ್ರೆ ಹಾಗೂ ವಿಕಸಿತ ಭಾರತ ಸಂಕಲ್ಪ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿಕಸಿತ ಭಾರತ ನಿರ್ಮಾಣವೆಂಬುದು ಕೇವಲ ಒಂದು ಕನಸಲ್ಲ; ಅದು ಪ್ರತಿಯೊಬ್ಬ ಭಾರತೀಯನ ಸಂಕಲ್ಪವಾಗಬೇಕು ಎಂದು ಕರೆ ನೀಡಿದರು.

ಮೋದಿ ನಾಯಕತ್ವ ಕಾರಣ : ಕಳೆದ 25 ವರ್ಷಗಳ ಪ್ರಧಾನಿ ನರೇಂದ್ರಮೋದಿ ಅವರ ಸಾರ್ವಜನಿಕ ಜೀವನವು ದೇಶಕ್ಕಾಗಿ ಸಮರ್ಪಣೆ, ನಿರಂತರ ಪರಿಶ್ರಮ ಮತ್ತು ದೃಢ ಸಂಕಲ್ಪಕ್ಕೆ ಮಾದರಿಯಾಗಿದೆ. ಹಿಂದೆ ಭಾರತ ಎಂದರೆ, ಬಡ ದೇಶ ಮತ್ತು ಭಿಕ್ಷುಕರ ದೇಶ ಎಂಬಂತೆ ವಿದೇಶಿಗರು ಕಾಣುತ್ತಿದ್ದರು. ಆದರೆ, ಇಂದು ಇಡೀ ವಿಶ್ವವೇ ಭಾರತವನ್ನು ಕಾಣುವ ದೃಷ್ಟಿಕೋನ ಬದಲಾಗಿದೆ. ಇಡೀ ಜಗತ್ತೇ ಭಾರತದ ಕಡೆ ತಿರುಗಿನೋಡುತ್ತಿದೆ. ಮೋದಿ ನಾಯಕತ್ವವೇ ಇದಕ್ಕೆ ಕಾರಣ ಎಂದು ಬಣ್ಣಿಸಿದರು.

ಕೊರೊನಾ ದಲ್ಲಿ ಭಾರತದ ಸಾಮರ್ಥ್ಯ ಪರಿಚಯ : ಕೊರೊನಾ ಸಾಂಕ್ರಾಮಿಕದ ಸಂದರ್ಭದಲ್ಲಿ ಭಾರತವು ಕೋಟ್ಯಂತರ ಜನರಿಗೆ ಲಸಿಕೆ ನೀಡುವ ಮೂಲಕ ಬೃಹತ್ ಲಸಿಕಾ ಅಭಿಯಾನವನ್ನು ಯಶಸ್ವಿಯಾಗಿ ನಡೆಸಿತು. ಜೊತೆಗೆ ವ್ಯಾಕ್ಸಿನ್ ಮೈತ್ರಿ ಮೂಲಕ ಹಲವು ದೇಶಗಳಿಗೆ ಲಸಿಕೆಗಳನ್ನು ಪೂರೈಸಿ, ಜಾಗತಿಕ ಆರೋಗ್ಯ ಕ್ಷೇತ್ರದಲ್ಲಿಯೂ ತನ್ನ ಜವಾಬ್ದಾರಿಯನ್ನು ಭಾರತ ಸಮರ್ಥವಾಗಿ ನಿರ್ವಹಿಸಿ ತನ್ನ ಸಾಮರ್ಥ್ಯವನ್ನು ಇಡೀ ಜಗತ್ತಿಗೆ ಪರಿಚಯಿಸಿತು ಎಂದು ತಿಳಿಸಿದರು.

ಆತ್ಮನಿರ್ಭರ ಭಾರತ : ಪಶ್ಚಿಮ ಏಷ್ಯಾದ ಸಂಘರ್ಷ ಸೇರಿದಂತೆ ಜಾಗತಿಕ ಮಟ್ಟದಲ್ಲಿ ಹಲವು ಸವಾಲುಗಳು ಎದುರಾಗಿರುವ ಸಂದರ್ಭದಲ್ಲಿ ಭಾರತ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯುತ್ತಿದೆ. ಅನೇಕ ರಾಷ್ಟ್ರಗಳು ಆರ್ಥಿಕತೆ ಒತ್ತಡಕ್ಕೆ ಒಳಗಾಗಿದ್ದರೂ, ಭಾರತ ಆರ್ಥಿಕ ತಂತ್ರಜ್ಞಾನ ಮತ್ತು ಉದ್ಯಮಶೀಲತೆಯಲ್ಲಿ ಹೊಸ ಮೈಲಿಗಲ್ಲುಗಳನ್ನು ಸಾಧಿಸುತ್ತಿದೆ. ಆತ್ಮನಿರ್ಭರ ಭಾರತ ಮತ್ತು ಮೇಕ್ ಇನ್ ಇಂಡಿಯಾ ಅಭಿಯಾನಗಳ ಮೂಲಕ ದೇಶೀಯ ಉತ್ಪಾದನೆಗೆ ಉತ್ತೇಜನ ನೀಡಲಾಗಿದೆ. ಭಾರತವು ಕೇವಲ ಆಮದು ಮಾಡಿಕೊಳ್ಳುವ ರಾಷ್ಟ್ರವಾಗಿ ರದೆ, ತನ್ನದೇ ಉತ್ಪನ್ನಗಳನ್ನು ಜಾಗತಿಕ ಮಾರುಕಟ್ಟೆಗೆ ರಫ್ತು ಮಾಡುವ ಸಾಮರ್ಥ್ಯವನ್ನು ವೃದ್ಧಿಸಿಕೊಂಡಿದೆ ಎಂದರು.

ರಾಜ್ಯ ಬಿಜೆಪಿ ಪ್ರಕೋಷ್ಠದ ಸಹ ಸಂಚಾಲಕ ಪಣೀಶ್ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರು ಇಡೀ ಬದುಕನ್ನೇ ಸೇವೆಯಾಗಿಸಿಕೊಂಡಿದ್ದಾರೆ. ಸಾಮಾನ್ಯ ಕುಟುಂಬದಿಂದ ಚಹಾ ಮಾರುತ್ತಿದ್ದವರು ದೇಶದ ಪ್ರಧಾನಮಂತ್ರಿಯಾಗಿ ಇಡೀ ಜಗತ್ತು ಭಾರತದತ್ತ ತಿರುಗಿ ನೋಡುವಂತೆ ಮಾಡಿದ್ದಾರೆ. 12 ವರ್ಷ ಪ್ರಧಾನಿಯಾಗಿ ಮತ್ತು 13 ವರ್ಷ ಗುಜರಾತ್ ಮುಖ್ಯಮಂತ್ರಿಯಾಗಿ ಕೆಲಸ ಮಾಡಿರುವ ಅವರು, ಭಾರತವನ್ನು ಬಲಾಢ್ಯ ರಾಷ್ಟ್ರವಾಗಿ ರೂಪಿಸಿದ್ದಾರೆ ಎಂದರು.

ಈ ಹಿಂದೆ ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾಗಿ ಉತ್ತಮ ಆಡಳಿತ ನೀಡಿದ್ದರು. ಭಾರತ ಪ್ರಕಾಶಿಸುತ್ತಿದೆ ಎಂದು ಇಡೀ ದೇಶದ ಮಾತಾಗಿತ್ತು. ಆದರೆ ಅತಿಯಾದ ವಿಶ್ವಾಸದಲ್ಲಿ ಬಿಜೆಪಿ ಕಾರ್ಯಕರ್ತರು ಮನೆಯಲ್ಲೇ ಕುಳಿತೆವು. ಇದರ ಪರಿಣಾಮ ಅತ್ಯುತ್ತಮ ಆಡಳಿತ ನೀಡಿದ್ದರು ಮತ್ತೊಂದು ಅವಕಾಶ ವಾಜಪೇಯಿ ಅವರಿಗೆ ಸಿಗಲಿಲ್ಲ. ಹೀಗಾಗಿ ಸೇವಾ ಸಂಕಲ್ಪ ಅಭಿಯಾನ ನಡೆಸಲಾಗುತ್ತಿದ್ದು, ಮೋದಿ ಜನಪರ ಆಡಳಿತವನ್ನು ತಿಳಿಸುವ ಕೆಲಸವಾಗಬೇಕು. ನಾವು ವಿಕಸಿತ ಭಾರತ ಮಾಡಿ ತೋರಿಸುತ್ತೇವೆ ಎಂಬ ಮೋದಿ ಘೋಷಣೆ ಮಾಡಿದ್ದಾರೆ. ಅದರ ಸಾಕಾರಕ್ಕೆ ಎಲ್ಲರೂ ಶ್ರಮಿಸಬೇಕು ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ಅ. ದೇವೇಗೌಡ, ಬೆಂಗಳೂರು ಗ್ರಾಮಾಂತರ ಸಹ ಪ್ರಭಾರಿ ವಾಸುದೇವ್ ಮಾತನಾಡಿದರು. ಕೆಎ[illegible]ಸಿ ಮಾಜಿ ಅಧ್ಯಕ್ಷ ಗೌತಮ್ ಗೌಡ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ವೇದಿಕೆಯಲ್ಲಿ ಬಿಜೆಪಿ ಜಿಲ್ಲಾ ಅಧ್ಯಕ್ಷ ಆನಂದಸ್ವಾಮಿ, ಮಹಿಳಾ ಜಿಲ್ಲಾಧ್ಯಕ್ಷೆ ವೇದ ವೆಂಕಟೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಬಸವನಪುರ ಪ್ರಕಾಶ್, ಶಿವಮುತ್ತು, ಚಂದ್ರಶೇಖರ್, ಮುಖಂಡರಾದ ಪ್ರಸಾದ್ ಗೌಡ, ಎಸ್. ಆರ್.ನಾಗರಾಜು, ಆರ್.ವಿ.ಸುರೇಶ್, ಪದ್ಮನಾಭ್, ಚಂದನ್ ಮೋರೆ, ಸಿದ್ದರಾಜು, ಕಾಳಯ್ಯ, ಚನ್ನಪ್ಪ, ಪ್ರವೀಣ್ ಗೌಡ, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಶಿವಲಿಂಗಪ್ಪ ಸೇರಿದಂತೆ ಹಲವರು ಇದ್ದರು.

ಸಮಾಜಮುಖಿ ಕಾರ್ಯಕ್ರಮಗಳ ಮುಖೇನ ಅರ್ಥಪೂರ್ಣವಾಗಿ ಜನ್ಮದಿನ ಆಚರಿಸಿಕೊಂಡ ನಾಯಕ

ಸೂರ್ಯಪ್ರಗತಿನ್ಯೂಸ್.ಕಾಂ

ಬನ್ನೇರುಘಟ್ಟದ ಯುವ ನಾಯಕ ಅನಿಲ್ ಅವರ ಜನ್ಮದಿನದ ಸಂಭ್ರಮಾಚರಣೆ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಸಾವಿರಾರು ಸ್ನೇಹಿತರ ಜೊತೆ ಅನಿಲ್ ಕುಮಾರ್ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡರು. ಸಮಾಜಮುಖಿ ಕಾರ್ಯಗಳಿಂದಲೇ ಹೆಸರುವಾಸಿಯಾಗಿರುವ ಅನಿಲ್ ಈ ಬಾರಿಯೂ ವಿಶಿಷ್ಟವಾಗಿ ಜನ್ಮದಿನ ಆಚರಿಸಿಕೊಂಡಿದ್ದಾರೆ. ಬೃಹತ್ ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರ ಆಯೋಜಿಸುವ ಮೂಲಕ ವಿಶೇಷತೆ ಮೆರೆದಿದ್ದಾರೆ. ಜಿಗಣಿಯ ಎಕನಾ ಆಸ್ಪತ್ರೆ, ಶ್ರೀನಿಕ್ ನೇತ್ರಾಲಯ, ವೆಂಕಟೇಶ್ವರ ದಂತ ಮಹಾವಿದ್ಯಾಲಯ, ಅಬ್ಬಾಟ್ ಇಂಡಿಯಾ, ಹೊಸಬೆಳಕು ಟ್ರಸ್ಟ್ (ರಿ) ಜಿಗಣಿ, ಸರ್ವಮಂಗಳ ಮೆಮೋರಿಯಲ್ ಟ್ರಸ್ಟ್ (ರಿ), ಸಾಯಿವಿನೋದ್ ಚಾರಿಟಬಲ್ ಟ್ರಸ್ಟ್ (ರಿ), ಲಕ್ಷ್ಮಿ ಲಲಿತಾಂಬ ಸೌಂಡ್ಸ್ ಮುಂತಾದ ವೈದ್ಯಕೀಯ ಸಂಸ್ಥೆಗಳು ಹಾಗೂ ಸಾಮಾಜಿಕ ಸಂಸ್ಥೆಗಳ ಸಹಯೋಗದೊಂದಿಗೆ ಅಕ್ಟೋಬರ್ 2ರ ಶುಕ್ರವಾರದಂದು ಬನ್ನೇರುಘಟ್ಟದ ರಂಗನಾಥ ಕಲ್ಯಾಣ ಮಂಟಪದಲ್ಲಿ ವಿವಿಧ ಉಚಿತ ವೈದ್ಯಕೀಯ ತಪಾಸಣೆ ಶಿಬಿರ ನಡೆಸಲಾಯಿತು.



ಉಚಿತ ವೈದ್ಯಕೀಯ ತಪಾಸಣೆ ಶಿಬಿರದಲ್ಲಿ ನೂರಾರು ಜನ ತಮ್ಮ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಶಿಬಿರದಲ್ಲಿ ಹಲವು ಮಂದಿ ತಮ್ಮ ಅಂಗಾಂಗ ದಾನ ಪತ್ರಕ್ಕೆ ಸಹಿ ಹಾಕಿದರು. ನೂರಾರು ಯುವಕರು ರಕ್ತದಾನ ಮಾಡುವ ಮೂಲಕ ರಕ್ತದಾನದ ಮಹತ್ವ ಮೆರೆದರು. ಇದೇ ಸಂದರ್ಭದಲ್ಲಿ ಬನ್ನೇರುಘಟ್ಟದ ಸುಮಾರು 1000ಕ್ಕು ಹೆಚ್ಚು ಸುಮಂಗಲಿ ಮಹಿಳೆಯರಿಗೆ ಬಾಗೀನ ವಿತರಣೆ ಸಹ ಮಾಡಲಾಯಿತು.

ಬದುಕಿನಲ್ಲಿ ಮಾನವೀಯ ಮೌಲ್ಯಗಳನ್ನು ಹೊಂದಿರುವವನೇ ನಿಜವಾದ ಜನ ನಾಯಕನಾಗ್ತಾನೆ.. ಸ್ನೇಹ, ವಿಶ್ವಾಸವೇ ಬದುಕಿನ ಆದ್ಯತೆ ಎಂದು ಬದುಕುವ ಮನುಷ್ಯ ಸಮಾಜದ ಆಸ್ತಿಯಾಗ್ತಾನೆ.. ಪರರ ದುಃಖದುಮ್ಮಾನಗಳಿಗೆ ಸ್ಪಂದಿಸುವವನು ಒಬ್ಬ ನಿಜವಾದ ಜನಪರ ಕಾಳಜಿಯ ಮುಂದಾಳುವಾಗ್ತಾನೆ.. ಈ ಎಲ್ಲಾ ಗುಣಗಳನ್ನು ಹೊಂದಿರುವ ಬನ್ನೇರುಘಟ್ಟದ ಯುವ ನಾಯಕ ಅನಿಲ್ ಕುಮಾರ್..

ಅಸಂಖ್ಯಾತ ಯುವಕರ ಕಣ್ಮಣಿ ಉತ್ಸಾಹಿ ಯುವ ಉದ್ಯಮಿ, ಸಮಾಜ ಸೇವಕ ಹಾಗೂ ಜನಹಿತ ಚಿಂತಕ ಅನಿಲ್ ಕುಮಾರ್, ತಮ್ಮ ಬದುಕನ್ನು ಸಮಾಜಮುಖಿ ಕಾರ್ಯಗಳಿಗಾಗಿ ಮೀಸಲಿಟ್ಟಿದ್ದಾರೆ. ಕೋವಿಡ್ ಸಂಕಷ್ಟದ ಕಾಲದಲ್ಲಿ ಸಾವಿರಾರು ಜನರಿಗೆ ನಿತ್ಯ ಅನ್ನದಾನ ಮಾಡಿದ ಅನಿಲ್ ಅವರ ನಿಸ್ವಾರ್ಥ ಸೇವಾಗುಣವನ್ನು ಜನ ಇನ್ನೂ ಮರೆತಿಲ್ಲ.. ಯಾವುದೇ ಸಂದರ್ಭದಲ್ಲಿ ಯಾರಿಗೇ ಕಷ್ಟವಾದರೂ ರಕ್ಷಣಕ್ಕೆ ಮಿಡಿಯುವ ಸೂಕ್ಷ್ಮ ಸಂವೇದನೆಯ ಜನನಾಯಕ ಅನಿಲ್ ಕುಮಾರ್ ಅವರು..

ಅನಿಲ್ ಅವರು ಬನ್ನೇರುಘಟ್ಟದಲ್ಲಿ ಅದೆಷ್ಟು ಜನಪ್ರಿಯ ನಾಯಕರಾಗಿ ಬೆಳೆಯುತ್ತಿದ್ದಾರೆ ಎಂಬುದಕ್ಕೆ ಅವರು ಗಳಿಸಿರುವ ಜನಪ್ರೀತಿಯೆ ನಿದರ್ಶನ. ಅವರ ಒಂದು ಕರೆಗೆ ಸಾವಿರ ಸಂಖ್ಯೆಯಲ್ಲಿ ಯುವಕರು ಜಮೆಯಾಗುತ್ತಾರೆ. ಭವಿಷ್ಯದಲ್ಲಿ ಒಬ್ಬ ಯೋಗ್ಯ ಜನಪ್ರತಿನಿಧಿಯಾಗಬಲ್ಲ ಭರವಸೆ ಮೂಡಿಸಿರುವ ಅನಿಲ್ ಕುಮಾರ್ ಅವರ ಗಾಡ್ ಫಾದರ್ ಮಾಜಿ ಸಚಿವರು ಹಾಗೂ ಬಿಜೆಪಿಯ ಜನಪ್ರಿಯ ನೇತಾರರಾಗಿರುವ ಶ್ರೀ ಮುರುಗೇಶ್ ನಿರಾಣಿಯವರು. ಪ್ರತಿ ವರ್ಷ ಮುರುಗೇಶ್ ನಿರಾಣಿಯವರ ಜನ್ಮದಿನವನ್ನು ತಮ್ಮ ಮನೆಯ ಹಬ್ಬದಂತೆ ಸಂಭ್ರಮಿಸುತ್ತಾರೆ ಅನಿಲ್.

ತಾವು ಖರೀದಿಸಿದ ಕಾರ್ ಅನ್ನು ಮುರುಗೇಶ್ ನಿರಾಣಿಯವರ ಕೈನಿಂದ ಪಡೆದುಕೊಂಡು ತಮಗೆ ಅವರೆಷ್ಟು ಮುಖ್ಯ ಎನ್ನುವುದನ್ನು ಅನಿಲ್ ನಿರೂಪಿಸಿದ್ದರು. ನಿರಾಣಿಯವರೂ ಸಹ ಅನಿಲ್ ಅವರ ಮೇಲೆ ಅಷ್ಟೇ ಅಗಾಧ ವಿಶ್ವಾಸ ಇಟ್ಟುಕೊಂಡಿದ್ದಾರೆ. ತಮ್ಮ ಬಿಡುವಿಲ್ಲದ ಕೆಲಸ ಕಾರ್ಯಗಳ ಮಧ್ಯೆಯೂ ಕಳೆದ ವರ್ಷದ ಅನಿಲ್ ಅವರ ಜನ್ಮದಿನದಂದು ಬನ್ನೇರುಘಟ್ಟಕ್ಕೆ ಬಂದು ಹರಸಿದ್ದರು ಮುರುಗೇಶ್ ನಿರಾಣಿಯವರು..

ಧಾರ್ಮಿಕ ಪ್ರವೃತ್ತಿಯ ಅನಿಲ್ ಅವರು ಬನ್ನೇರುಘಟ್ಟದ ಶ್ರೀ ಚಂಪಕಧಾಮ ಸ್ವಾಮಿಯ ಮಹಾಭಕ್ತರೂ ಕೂಡಾ ಹೌದು. ಬದುಕನ್ನು ಸರಳವಾಗಿ, ಅರ್ಥಪೂರ್ಣವಾಗಿ, ಮಾದರಿಯಾಗಿ ರೂಪಿಸಿಕೊಳ್ಳಬೇಕಿದ್ದರೇ ಸೇವೆಗೆ ಆದ್ಯತೆ ನೀಡಬೇಕು. ಹತ್ತು ಜನರಿಗೆ ಉಪಯೋಗವಾಗುವ ಹಾಗೆ ಬದುಕಿದಾಗ ಮಾತ್ರ ನಮ್ಮ ಸಣ್ಣ ಬದುಕು ಸುಂದರವಾಗುತ್ತದೆ ಎನ್ನುವ ಉದಾತ್ತ ಧ್ಯೇಯ ಹೊಂದಿರುವ ಅನಿಲ್ ಕುಮಾರ್ ಮುಂಬರುವ ದಿನಗಳಲ್ಲಿ ಒಬ್ಬ ಅತ್ಯುತ್ತಮ ಜನನಾಯಕರಾಗುತ್ತಾರೆ ಎಂಬ ನಂಬಿಕೆ ಮೂಡಿಸಿದ್ದಾರೆ. ಸೇವೆಯೇ ಬದುಕಿನ ಸಾರ್ಥಕತೆ ಎಂಬ ಸಂದೇಶವನ್ನು ತಮ್ಮ ಕ್ರಿಯೆಯ ಮೂಲಕ ಸಾಬೀತು ಮಾಡಿದ್ದಾರೆ.

ಬೃಹತ್ ಗುಂಡಿಯ ಮಧ್ಯೆ

ಮಹಿಳೆಯರು ನಿಂತು ತಮ್ಮ ಆಕ್ರೋಶ



ಸೂರ್ಯಪ್ರಗತಿನ್ಯೂಸ್.ಕಾಂ

ಅತ್ತಿಬೆಲೆ (ಆನೇಕಲ್) : ಇಲ್ಲಿಗೆ ಸಮೀಪದ ನೆರಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಾಯಿ ನಗರ ಬಡಾವಣೆಯಲ್ಲಿ ರಸ್ತೆ ಸೇರಿದಂತೆ ಮೂಲಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಒತ್ತಾಯಿಸಿ ಸ್ಥಳೀಯರು ಪ್ರತಿಭಟನೆ ನಡೆಸಿದರು. ಬೃಹತ್ ಗುಂಡಿಯ ಮಧ್ಯೆ ಮಹಿಳೆಯರು ನಿಂತು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಎಲ್ಲಿಯವರೆಗೂ ಹೋರಾಟ ರಸ್ತೆ ಆಗುವವರೆಗೂ ಹೋರಾಟ, ಬೇಕೇ ಬೇಕು ಮೂಲಸೌಲಭ್ಯಗಳು ಎಂದು ಘೋಷಣೆಗಳನ್ನು ಕೂಗಿ ಮಹಿಳೆಯರು ಸೇರಿದಂತೆ ನೂರಾರು ಮಂದಿ ಪ್ರತಿಭಟನೆ ನಡೆಸಿದರು.

ನೆರಳೂರು ಗ್ರಾಮ ಪಂಚಾಯಿತಿಯು ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿದ್ದರೂ ರಸ್ತೆ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಸೌಲಭ್ಯಗಳು ದೊರೆಯುತ್ತಿಲ್ಲ. ರಸ್ತೆ ಸಮಸ್ಯೆಯಿಂದಾಗಿ ಸಾರ್ವಜನಿಕರು ಪ್ರತಿನಿತ್ಯ ಪರದಾಡುವಂತಾಗಿದೆ. ರಸ್ತೆ ಗುಂಡಿಗಳಲ್ಲಿ ಮಳೆ ಬಂದಾಗ ನೀರು ನಿಂತು ಸಾರ್ವಜನಿಕರು ಪರದಾಡುವಂತಾಗಿದೆ. ಹಲವು ಬಾರಿ ಗ್ರಾಮ ಪಂಚಾಯಿತಿಗೆ ಮನವಿ ಸಲ್ಲಿಸಿದರೂ ಯಾವುದೇ ಉಪಯೋಗವಿಲ್ಲ ಎಂದು ಸ್ಥಳೀರಾದ ರಾಮಸ್ವಾಮಿರೆಡ್ಡಿ ತಿಳಿಸಿದರು.

ಗ್ರಾಮಸ್ಥರಾದ ಜಲಜಮ್ಮ, ಪುಟ್ಟರಾಜು, ಅರುಣ್ ಕುಮಾರ್, ಚಂದ್ರಶೇಖರ್, ಶ್ರೀನಿವಾಸರೆಡ್ಡಿ, ಶಂಕರ್, ಮಹದೇಶ್, ನಂದೀಸ್, ಮರಿಯಾ, ರವಿಚಂದ್ರನ್ ಇದ್ದರು.

ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಜನ ಜಾಗೃತಿ ಸಮಾವೇಶ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್‌ನಿಂದ ಈ ತಿಂಗಳ 9ರಂದು ಶುಕ್ರವಾರ ನಗರದ ಹನುಮಂತಪುರದ ಕೊಲ್ಲಾಪುರದಮ್ಮ ಸಭಾ ಭವನದಲ್ಲಿ ದುಶ್ಚಟಮುಕ್ತ ಸಮಾಜ ನಿರ್ಮಾಣಕ್ಕಾಗಿ ಗಾಂಧಿ ಸ್ಮೃತಿ ಮತ್ತು ಬೃಹತ್ ಜನಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್‌ನ ಜಿಲ್ಲಾಅಧ್ಯಕ್ಷಆರ್. ಕಾಮರಾಜ್ ಹೇಳಿದರು.



ಬುಧವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 10.30ಕ್ಕೆ ನಡೆಯುವ ಸಮಾವೇಶವನ್ನು ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ಉದ್ಘಾಟಿಸುವರು. ಎಲೆ ರಾಂಪುರ ಕುಂಚಿಟಿಗರ ಮಹಾ ಸಂಸ್ಥಾನದ ಡಾ. ಹನುಮಂತನಾಥ ಸ್ವಾಮೀಜಿ ಸಾನಿಧ್ಯ ವಹಿಸುವರು ಟ್ರಸ್ಟ್ ಅಧ್ಯಕ್ಷ ಆರ್. ಕಾಮರಾಜ್ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್ ಗಾಂಧೀಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರೆ, ಲೇಖಕಿ ಮಲ್ಲಿಕಾ ಬಸವರಾಜು ಗಾಂಧೀಜಿ ಬಗ್ಗೆ ಉಪನ್ಯಾಸ ನೀಡುವರು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ಸತೀಶ್ ಸುವರ್ಣ, ಉದ್ಯಮಿಗಳಾದ ಆರ್.ಎಲ್. ರಮೇಶ್‌ಬಾಬು, ಎಸ್.ಪಿ.ಚಿದಾನಂದ್, ಟ್ರಸ್ಟ್ ಉಪಾಧ್ಯಕ್ಷ ಅ.ನ. ಲಿಂಗಪ್ಪ ಭಾಗವಹಿಸುವರು. ಇದಕ್ಕೂ ಮೊದಲು ಮದ್ಯವ್ಯಸನ ಮುಕ್ತರಾಗಿರುವ ನವಜೀವನ ಸಮಿತಿಯ ಸುಮಾರು 500 ಜನ ಸದಸ್ಯರುಕೋತಿತೋಪು ವೃತ್ತದಿಂದ ಜಾಥಾದಲ್ಲಿ ಆಗಮಿಸುವರು ಎಂದು ತಿಳಿಸಿದರು.

ಮಹಾತ್ಮ ಗಾಂಧಿಯವರ ದುಶ್ಚಟ ಮುಕ್ತ ಸಮಾಜ ನಿರ್ಮಾಣದ ಕನಸನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ನನಸು ಮಾಡುತ್ತಿದ್ದಾರೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್ ಸಹಕಾರದೊಂದಿಗೆ ರಾಜ್ಯಾದ್ಯಂತ ವ್ಯಸನ ಮುಕ್ತ ಸಮಾಜ ನಿರ್ಮಾಣದ ನಿಟ್ಟಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವ್ಯಸನ ಬಾಧಿತ ಕುಟುಂಬಗಳಿಗೆ ಪರಿವರ್ತನೆ ಹೊಂದಲು ಸಹಕಾರ ನೀಡಲಾಗುತ್ತಿದೆ. 30 ವರ್ಷಗಳಿಂದ ಇದೂವರೆಗೂ ಸಂಘ ಸಂಸ್ಥೆಗಳ ಸಹಕಾರದೊಂದಿಗೆ 2120 ಮದ್ಯ ವರ್ಜನ ಶಿಬಿರಗಳನ್ನು ನಡೆಸಿ 1.45 ಲಕ್ಷಜನರು ವ್ಯಸನದಿಂದ ಮುಕ್ತಿಹೊಂದಲು ಅವಕಾಶವಾಗಿದೆ ಎಂದು ಆರ್.ಕಾಮರಾಜ್ ಹೇಳಿದರು.

ವ್ಯಸನ ಮುಕ್ತರಾದವರಿಗೆ ನವ ಜೀವನ ಸಮಿತಿಗಳ ಮೂಲಕ ಸಭೆ ಏರ್ಪಡಿಸಿ ಸ್ವಸಹಾಯ, ಸ್ವದ್ಯೋಗ, ವ್ಯಕ್ತಿತ್ವ ವಿಕಸನ, ಕೃಷಿ ಮತ್ತಿತರ ಚಟುವಟಿಕೆಗಳಲ್ಲಿ ತೊಡಗಿ ಕೊಳ್ಳಲು ಪ್ರೇರೇಪಣೆ ನೀಡಲಾಗುತ್ತಿದೆ. ರಾಜ್ಯದಲ್ಲಿ 3000ಕ್ಕೂ ಹೆಚ್ಚು ನವಜೀವನ ಸಮಿತಿಗಳ ಮೂಲಕ ಇವರಯೋಗಕ್ಷೇಮಚಿಂತನೆ ಮಾಡಲಾಗುತ್ತಿದೆ. ಪ್ರತಿ ವರ್ಷದಂತೆ ಈ ಬಾರಿಯೂ ಗಾಂಧಿ ಜಯಂತಿ ಅಂಗವಾಗಿ ಅಕ್ಟೋಬರ್ ತಿಂಗಳಲ್ಲಿ ರಾಜ್ಯಾದ್ಯಂತ 110 ಜನಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಇದರ ಭಾಗವಾಗಿ ಶುಕ್ರವಾರ ನಗರದಲ್ಲಿಗಾಂಧಿ ಸ್ಮೃತಿ ಮತ್ತು ಬೃಹತ್ ಜನ ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಆರ್. ಕಾಮರಾಜ್ ತಿಳಿಸಿದರು.

ಶ್ರೀ ಕ್ಷೇತ್ರಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ಸತೀಶ್ ಸುವರ್ಣ, ಜನ ಜಾಗೃತಿ ಟ್ರಸ್ಟ್ ಉಪಾಧ್ಯಕ್ಷ ಅ.ನ. ಲಿಂಗಪ್ಪ, ಯೋಜನಾಧಿಕಾರಿಗಳಾದ ಪಿ.ಬಿ. ಸಂದೇಶ್, ಪ್ರಭಾಕರ್, ಸಂಯೋಜಕ ಸಂತೋಷ್ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

'ಶ್ರೀರಾಮ್ ಸೇವಾ ಸಂಕಲ್ಪ' ಚಾಲಕರ ಮಕ್ಕಳಿಗೆ ವಿದ್ಯಾರ್ಥಿವೇತನ ವಿತರಣೆ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಶ್ರೀ ರಾಮ್ ಫೈನಾನ್ಸ್ ಸಂಸ್ಥೆಯ 'ಶ್ರೀ ರಾಮ್ ಸೇವಾ ಸಂಕಲ್ಪ' ಯೋಜನೆಯಡಿ ವಾಹನ ಚಾಲಕರ ಮಕ್ಕಳಿಗೆ ಪ್ರತಿ ವರ್ಷ ನೀಡಲಾಗುವ ವಿದ್ಯಾರ್ಥಿ ಪ್ರೋತ್ಸಾಹಧನ ವಿತರಣಾ ಸಮಾರಂಭವನ್ನು ಈ ತಿಂಗಳ 10ರಂದು ಬೆಳಿಗ್ಗೆ 11 ಗಂಟೆಗೆ ನಗರದ ಅಮಾನಿಕೆರೆ ಅಂಗಳದ ಗಾಜಿನ ಮನೆಯಲ್ಲಿ ಹಮ್ಮಿಕೊಳ್ಳಲಾಗಿದೆ.



ಕೇಂದ್ರ ಸಚಿವ ವಿ. ಸೋಮಣ್ಣ ಚಾಲನೆ: ಕಾರ್ಯಕ್ರಮವನ್ನು ಕೇಂದ್ರ ಜಲಶಕ್ತಿ ಹಾಗೂ ರೈಲ್ವೇ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಉದ್ಘಾಟಿಸಲಿದ್ದಾರೆ. ಹಿರೇಮಠದ ಡಾ. ಶಿವಾನಂದ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಶ್ರೀರಾಮ್ ಫೈನಾನ್ಸ್‌ನ ಕಾರ್ಯಾಂಗ ನಿರ್ದೇಶಕ ಶ್ರೀಧರ್ ಮಠ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ನಗರಪಾಲಿಕೆ ಆಯುಕ್ತೆ ಬಿ. ಶುಭಾ, ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿ ಟಿ. ಜಿ. ಹೇಮಾವತಿ, ಅಡಿಷನಲ್ ಎಸ್ಪಿ ಪುರುಷೋತ್ತಮ್, ನಗರಾಭಿವೃದ್ಧಿ ಪ್ರಾಧಿಕಾರದ (ಟುಡಾ) ಆಯುಕ್ತ ಉಮೇಶ್‌ಚಂದ್ರ, ರೀಜನಲ್ ಬಿಸಿನೆಸ್ ಹೆಡ್ ಹೆಚ್. ಚನ್ನನಗೌಡ, ಪ್ರಹ್ಲಾದ್ ಕುಲಕರ್ಣಿ ಹಾಗೂ ತಜ್ಞವೈದ್ಯ ಡಾ. ವಿ. ಮುರಳೀಧರ್ ಭಾಗವಹಿಸಲಿದ್ದಾರೆ.

ವಿದ್ಯಾರ್ಥಿವೇತನದ ಅರ್ಹತೆ ಹಾಗೂ ವಿವರ: 8 ರಿಂದ 10 ನೇ ತರಗತಿ: 7ನೇ ತರಗತಿಯಲ್ಲಿ ಕನಿಷ್ಠ 60% ಅಂಕ ಗಳಿಸಿರಬೇಕು. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ 4,000 ಪ್ರೋತ್ಸಾಹಧನ ನೀಡಲಾಗುತ್ತದೆ.

11 ಮತ್ತು 12 ನೇ ತರಗತಿ (ಪಿಯುಸಿ): ಪ್ರತಿ ವರ್ಷ 60% ಅಂಕಗಳೊಂದಿಗೆ ತೇರ್ಗಡೆಯಾಗುವ ವಿದ್ಯಾರ್ಥಿಗಳಿಗೆ [illegible]4,500 ನೀಡಲಾಗುತ್ತದೆ.

ಷರತ್ತುಗಳು: ಪೋಷಕರು ವಾಹನ ಚಾಲಕರಾಗಿರಬೇಕು, ಚಾಲನಾ ಪರವಾನಗಿ (ಡಿಎಲ್) ಹೊಂದಿರಬೇಕು ಅಥವಾ ವಾಹನ ಮಾಲೀಕರಾಗಿರಬೇಕು. ಒಮ್ಮೆ ಆಯ್ಕೆಯಾದ ವಿದ್ಯಾರ್ಥಿಗಳು ಪ್ರತಿ ವರ್ಷ 60% ಅಂಕ ಗಳಿಸಿದರೆ ಪಿಯುಸಿವರೆಗೆ ನಿರಂತರವಾಗಿ ನೆರವು ಪಡೆಯಬಹುದು.

ಸಾಮಾಜಿಕ ಸೇವೆ:

2013ರಲ್ಲಿ ಸ್ಥಾಪಿತವಾದ ಶ್ರೀರಾಮ್ ಫೌಂಡೇಶನ್ ಮೂಲಕ ಪ್ರತಿ ವರ್ಷ ದೇಶಾದ್ಯಂತ 30,000ಕ್ಕೂ ಹೆಚ್ಚು ಚಾಲಕರು ಹಾಗೂ ಕ್ಲೀನರ್‌ಗಳ ಮಕ್ಕಳಿಗೆ ವಿದ್ಯಾರ್ಥಿವೇತನ ನೀಡಲಾಗುತ್ತಿದೆ. ಇದರೊಂದಿಗೆ ಕಿವುಡ ಮಕ್ಕಳ ಶಾಲೆ, ವೃದ್ಧಾಶ್ರಮಗಳ ನಿರ್ವಹಣೆ, ಗಿಡ ನೆಡುವುದು ಹಾಗೂ ಬೀದಿ ಬದಿ ವ್ಯಾಪಾರಿಗಳಿಗೆ ಛತ್ರಿ ವಿತರಣೆಯಂತಹ ಹಲವು ಸಾಮಾಜಿಕ ಕಾರ್ಯಕ್ರಮಗಳನ್ನು ಸಂಸ್ಥೆ ನಡೆಸಿಕೊಂಡು ಬರುತ್ತಿದೆ.

ಸಾಣ್ ಸುದ್ದಿ



ತುಮಕೂರು ನಗರದ ಸರ್ಕಾರಿ ನೌಕರರ ಸಂಘದ ಭವನದಲ್ಲಿ ಇಂದು ನಡೆದ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಯಲ್ಲಿ ಅವಿರೋಧವಾಗಿ ತುಮಕೂರು ಜಿಲ್ಲಾ ಘಟಕದ ಅಧ್ಯಕ್ಷರಾಗಿ ಪ್ರವೀಣ್ ಕುಮಾರ್ ಎಂ ಬಿ, ತಾಲೂಕು ಅಧ್ಯಕ್ಷರಾಗಿ ದೊಡ್ಡ ರಂಗಪ್ಪ, ತಾಲೂಕು ಕಾರ್ಯದರ್ಶಿಗಳಾಗಿ ಮಧುಸೂದನ್, ಖಜಾಂಚಿಯಾಗಿ ಪಟೇಲ್ ಚನ್ನೇಗೌಡ ರವರುಗಳ ಆಯ್ಕೆಯಾಗಿದ್ದು, ಇವರನ್ನು ತುಮಕೂರು ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ ಅಭಿನಂದಿಸಲಾಯಿತು. ಸಂದರ್ಭದಲ್ಲಿ ಸರ್ಕಾರಿ ನೌಕರ ಸಂಘದ ಜಿಲ್ಲಾಧ್ಯಕ್ಷರಾದ ಎಚ್ ರಮೇಶ್, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಕೆ ನಾಗರಾಜು, ಪ್ರಧಾನ ಕಾರ್ಯದರ್ಶಿಗಳಾದ ಪರಮೇಶ್ ಆರ್, ಹಿರಿಯ ಉಪಾಧ್ಯಕ್ಷರಾದ ಪದ್ಮರಾಜ ಡಿ, ಪದಾಧಿಕಾರಿಗಳು ಹಾಗೂ ನಿರ್ದೇಶಕರುಗಳಾದ ಹರೀಶ್ ಕುಮಾರ್, ಪಿ.ಎನ್.ದಿನೇಶ್, ಕೆ.ವಿ.ನಾಗರಾಜ್, ಮೆಹಬೂಬಿ, ಶ್ರೀನಿವಾಸ್ ಟಿ, ರಾಜು ಜಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು

ವಿವಿಧ ಮಾಧ್ಯಮ ಸಂಸ್ಥೆಗಳಲ್ಲಿ ಇಂಟರ್ನ್‌ಶಿಪ್‌ಗಾಗಿ ಅರ್ಜಿ ಆಹ್ವಾನ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಕರ್ನಾಟಕ ಮಾಧ್ಯಮ ಅಕಾಡೆಮಿಯು ಪತ್ರಿಕೋದ್ಯಮದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದ ಮಹಿಳಾ ಅಭ್ಯರ್ಥಿಗಳಿಗೆ ವಿವಿಧ ಮಾಧ್ಯಮ ಸಂಸ್ಥೆಗಳಲ್ಲಿ ಇಂಟರ್ನ್‌ಶಿಪ್‌ಗಾಗಿ ಬರವಣಿಗೆಯಲ್ಲಿ ಪರಿಣತಿ ಮತ್ತು ಪತ್ರಿಕೋದ್ಯಮದಲ್ಲಿ ಆಸಕ್ತಿ ಹೊಂದಿರುವ ಮಹಿಳೆಯರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಅಯೇಶಾ ಖಾನಂ ತಿಳಿಸಿದ್ದಾರೆ.

ಅರ್ಜಿದಾರರು 2022–23, 2023–24, 2024–2025 ಹಾಗೂ 2025–2026ನೇ ಶೈಕ್ಷಣಿಕ ವರ್ಷದಲ್ಲಿ ವಿಶ್ವವಿದ್ಯಾಲಯದಿಂದ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಪತ್ರಿಕೋದ್ಯಮದಲ್ಲಿ ಪದವಿ ಹೊಂದಿರಬೇಕು. ಆಯ್ಕೆಯಾದ ಅಭ್ಯರ್ಥಿಗಳಿಗೆ ವಿವಿಧ ಮಾಧ್ಯಮ ಸಂಸ್ಥೆಗಳಲ್ಲಿ 2 ತಿಂಗಳ ಇಂಟರ್ನ್‌ಶಿಪ್‌ಗೆ ಅವಕಾಶ ಕಲ್ಪಿಸಿ ಶಿಷ್ಯವೇತನ ನೀಡಲಾಗುವುದು. ಅಭ್ಯರ್ಥಿಗಳು ತಮ್ಮ ಸ್ವವಿವರ (Curriculum Vitae) ದೊಂದಿಗೆ ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ, ಪೂರಕ ದಾಖಲೆಗಳೊಂದಿಗೆ ಗೂಗಲ್ ಫಾರ್ಮ್ https: //docs.google.com /forms /d/e/1FAIpQLSfYwla ರಲ್ಲಿ ಅಕ್ಟೋಬರ್ 23ರೊಳಗಾಗಿ ಅರ್ಜಿ ಸಲ್ಲಿಸಬಹುದು ಎಂದು ಅವರು ತಿಳಿಸಿದ್ದಾರೆ.

ಆನ್‌ಲೈನ್ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ತುಮಕೂರು;ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ಅರ್ಹತಾ ವಿದ್ಯಾರ್ಥಿ ವೇತನ, ಶುಲ್ಕ ವಿನಾಯತಿ, ವಿದ್ಯಾಸಿರಿ–ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ಅಕ್ಟೋಬರ್ 31ರವರೆಗೆ ವಿಸ್ತರಿಸಲಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಸೌಲಭ್ಯಕ್ಕಾಗಿ ಅರ್ಹ ವಿದ್ಯಾರ್ಥಿಗಳು ಜಾಲತಾಣ https://ssp.postmatric.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಕಾರ್ಯಕ್ರಮ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಮಾಹಿತಿಗಾಗಿ ಜಾಲತಾಣ https://bcwd.karnataka.gov.in ಅನ್ನು ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 8050770005 ಅಥವಾ ಇಮೇಲ್: bcwdhelpline@gmail.com ಅಥವಾ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ ಇಮೇಲ್: Postmatrichelp@karnataka.gov.in ಅಥವಾ ದೂರವಾಣಿ ಸಂಖ್ಯೆ: 1902ನ್ನು ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

10 ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ : ಅರ್ಜಿ ಆಹ್ವಾನ

ತುಮಕೂರು(ಕ.ವಾ.)ಅ.5: ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ(ಸಿಡಾಕ್) ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರದ ವತಿಯಿಂದ ಜಿಲ್ಲೆಯಲ್ಲಿ ಸ್ವಂತ ಉದ್ಯಮ ಸ್ಥಾಪಿಸಲು ಬಯಸುವ ನಿರುದ್ಯೋಗಿ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳಿಗೆ ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಅಕ್ಟೋಬರ್ 12 ರಿಂದ ಹತ್ತು ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ನೀಡಲು ಉದ್ದೇಶಿಸಲಾಗಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಈ ತರಬೇತಿಯಲ್ಲಿ ಉದ್ಯಮಶೀಲರ ಗುಣಲಕ್ಷಣ, ಸಾಮರ್ಥ್ಯ, ಉದ್ಯಮಶೀಲತೆಯ ಅಭಿವೃದ್ಧಿಗೆ ಅವಶ್ಯವಿರುವ ಸಾಧನಾ ಪ್ರೇರಣ ತರಬೇತಿ, ಸ್ವಂತ ಉದ್ಯಮವನ್ನು ಸ್ಥಾಪಿಸಲು ಅನುಸರಿಸಬೇಕಾದ ಹಂತ, ಉದ್ಯಮ ಅವಕಾಶಗಳನ್ನು ಗುರುತಿಸುವುದು, ಉದ್ಯಮ ಆಯ್ಕೆಯ ವಿಧಾನ, ಹಣಕಾಸು ನಿರ್ವಹಣೆ, ಮಾರುಕಟ್ಟೆ ನಿರ್ವಹಣೆ, ಲೆಕ್ಕಪತ್ರ ನಿರ್ವಹಣೆ, ಸಣ್ಣ ಉದ್ಯಮ ನಿರ್ವಹಣೆ, ಸರ್ಕಾರದ ಸ್ವಂತ ಉದ್ಯೋಗ ಯೋಜನೆಗಳು, ಯೋಜನಾ ವರದಿ ತಯಾರಿಕೆ, ಇತ್ಯಾದಿ ವಿಷಯಗಳ ಕುರಿತು ಪರಿಣತಿ ಹೊಂದಿರುವ ಅತಿಥಿ ಬೋಧಕರಿಂದ ಉಪನ್ಯಾಸವನ್ನು ಏರ್ಪಡಿಸಲಾಗುವುದು. ತರಬೇತಿ ಭಾಗವಾಗಿ ಕೈಗಾರಿಕಾ ಭೇಟಿಯನ್ನು ಏರ್ಪಡಿಸಿ ಯಶಸ್ವಿ ಉದ್ಯಮಶೀಲರೊಂದಿಗೆ ಚರ್ಚಿಸುವ ಅವಕಾಶ ನೀಡಲಾಗುವುದು. ತರಬೇತಿ ಮುಗಿದ ನಂತರ ಉದ್ಯಮ ಪ್ರಾರಂಭಿಸಲು ಬೆಂಬಲ ಸೇವೆ ಒದಗಿಸಲಾಗುವುದು.

ಅಭ್ಯರ್ಥಿಗಳು 10ನೇ ತರಗತಿ ಪಾಸಾಗಿದ್ದು, 18 ರಿಂದ 45 ವರ್ಷದೊಳಗಿನವರಾಗಿರಬೇಕು. ಅರ್ಜಿ ಸಲ್ಲಿಸಲಿಚ್ಛಿಸುವ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯೊಂದಿಗೆ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಆಧಾರ್ ಕಾರ್ಡ್, ಜಾತಿ ಪ್ರಮಾಣಪತ್ರವನ್ನು ಲಗತ್ತಿಸಿ ಅಕ್ಟೋಬರ್ 7ರೊಳಗಾಗಿ ಉಪ ನಿರ್ದೇಶಕರ ಕಚೇರಿ, ಸಿಡಾಕ್, ಜಿಲ್ಲಾ ಕೈಗಾರಿಕಾ ಕೇಂದ್ರ, ರಿಸರ್ವ್ ಪೊಲೀಸ್ ಮೈದಾನದ ಎದುರು, ಎಸ್.ಐ.ಟಿ. ಬಸ್ ನಿಲ್ದಾಣ, ತುಮಕೂರು–572103 ಇವರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 9448812974 /7022746755ನ್ನು ಸಂಪರ್ಕಿಸಬೇಕೆಂದು ಸಲ್ಲಿಸಬೇಕೆಂದು ಸಿಡಾಕ್ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಪ್ರಾಥಮಿಕ ಸ್ಪಂದನೆ ಮತ್ತು ಹೃದಯ ಪುನಶ್ಚೇತನ’ ಕುರಿತು ಜನಜಾಗೃತಿ ತರಬೇತಿ ಹೃದಯಘಾತ ಸಂದರ್ಭದಲ್ಲಿ ಗೋಲ್ಡನ್ ಮಿನಿಟ್ ಅಗತ್ಯ : ಡಾ.ಅಜ್ಗರ್ ಬೇಗ್

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಅಪಘಾತ ಮತ್ತು ಹೃದಯ ಘಾತ ಸೇರಿದಂತೆ ತುರ್ತು ಸಂದರ್ಭಗಳಲ್ಲಿ ‘ಗೋಲ್ಡನ್ ಮಿನಿಟ್’ ಅತ್ಯಂತ ಅಮೂಲ್ಯವಾಗಿದ್ದು, ಆ ಸಮಯದಲ್ಲಿ ಸಮಯೋಚಿತವಾಗಿ ನೀಡುವ ಸಿ.ಪಿ.ಆರ್.(ಕಾರ್ಡಿಯೋಪಲ್ಮನರಿ ರಿಸುಟೇಶನ್) ವ್ಯಕ್ತಿಯ ಜೀವ ಉಳಿಸುವಲ್ಲಿ ಪ್ರಮುಖ ಪಾತ್ರ ಎಂದು ತುಮಕೂರು ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ. ಅಜ್ಗರ್ ಬೇಗಂರವರು ತಿಳಿಸಿದರು.



ನಗರದ ಶಿರಾ ರಸ್ತೆಯ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ ಶ್ರೀದೇವಿ ಇನ್ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ ಮೆಡಿಕಲ್ ಸ್ಕಿಲ್ಸ್ ಅಂಡ್ ಸಿಮ್ಯುಲೇಶನ್ ವತಿಯಿಂದ ಪ್ರಾಥಮಿಕ ಸ್ಪಂದನೆ ಹಾಗೂ ಹೃದಯ ಪುನಶ್ಚೇತನ (ಸಿ.ಪಿ.ಆರ್) ಕುರಿತು ಸಮುದಾಯ ಜಾಗೃತಿ ಮತ್ತು ತರಬೇತಿ ಕಾರ್ಯಕ್ರಮವನ್ನು ಅ.7 ರಂದು ಬುಧವಾರ ಬೆಳಗ್ಗೆ 10 ಗಂಟೆಗೆ ಶ್ರೀದೇವಿ ಆಸ್ಪತ್ರೆಯ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ್ದ ಡಾ. ಅಜ್ಗರ್ ಬೇಗಂರವರು ಮಾತನಾಡುತ್ತಾ ತುರ್ತು ಪರಿಸ್ಥಿತಿಯಲ್ಲಿ ಸಕಾಲದಲ್ಲಿ ಪ್ರಥಮ ಚಿಕಿತ್ಸೆ ಹಾಗೂ ಸಿ.ಪಿ.ಆರ್. ನೀಡುವ ಮೂಲಕ ಜೀವಹಾನಿಯ ಅಪಾಯವನ್ನು ಕಡಿಮೆ ಮಾಡಬಹುದು. ಆದ್ದರಿಂದ ಸಾರ್ವಜನಿಕರು ಮೂಲಭೂತ ಸಿ.ಪಿ.ಆರ್. ತರಬೇತಿ ಪಡೆದು ಕೊಳ್ಳುವುದು ಅಗತ್ಯವಾಗಿದೆ. ಮಗು, ವಯಸ್ಕ ಹಾಗೂ ವೃದ್ಧರಿಗೆ ಒಂದೇ ರೀತಿಯಲ್ಲಿ ಸಿ.ಪಿ.ಆರ್. ನೀಡಬಾರದು. ವಯಸ್ಸು ಮತ್ತು ಪರಿಸ್ಥಿತಿಗೆ ಅನುಗುಣವಾಗಿ ಸರಿಯಾದ ವಿಧಾನವನ್ನು ಅನುಸರಿಸುವ ಕುರಿತು ತರಬೇತಿ ಪಡೆಯಬೇಕು. ವೈದ್ಯಕೀಯ ನೆರವು ದೊರೆಯುವವರೆಗೆ ತಡ ಮಾಡದೆ ಸೂಕ್ತ ಪ್ರಾಥಮಿಕ ನೆರವು ನೀಡುವ ಕೌಶಲ್ಯವನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ರವರು ಮಾತನಾಡುತ್ತಾ ತುರ್ತು ಪರಿಸ್ಥಿತಿಯಲ್ಲಿ ಸುತ್ತ ಮುತ್ತಲಿನವರಿಗೆ ತಕ್ಷಣ ನೆರವಾಗಲು ಪ್ರತಿಯೊಬ್ಬರೂ ಮೂಲಭೂತ ತರಬೇತಿ ಪಡೆಯುವುದು ಅಗತ್ಯವಾಗಿದೆ. ಸ್ಕಿಲ್ ಲ್ಯಾಬ್ ಹಾಗೂ ಪ್ರಾತ್ಯಕ್ಷಿಕೆಗಳ ಮೂಲಕ ಹೃದಯಾಘಾತ, ಹೃದಯ ನೋವು, ವ್ಯಕ್ತಿ ಕುಸಿದು ಬೀಳುವುದು ಹಾಗೂ ಅಪಘಾತದಂತಹ ಸಂದರ್ಭಗಳಲ್ಲಿ ಕೈಗೊಳ್ಳಬೇಕಾದ ಪ್ರಾಥಮಿಕ ಕ್ರಮಗಳ ಕುರಿತು ತರಬೇತಿ ನೀಡಲಾಗುತ್ತಿದೆ. ಸಕಾಲದಲ್ಲಿ ಸರಿಯಾದ ನೆರವು ನೀಡುವುದರಿಂದ ಅಮೂಲ್ಯವಾದ ಜೀವವನ್ನು ಉಳಿಸಲು ಸಾಧ್ಯವಾಗುತ್ತದೆ. ಪ್ರತಿಯೊಬ್ಬರೂ ವೈದ್ಯರಾಗಿರಬೇಕೆಂದಿಲ್ಲ. ಆದರೆ ತುರ್ತು ಸಂದರ್ಭದಲ್ಲಿ ತಮಗೆ ತಿಳಿದಿರುವ ಸರಿಯಾದ ಕ್ರಮಗಳನ್ನು ಅನುಸರಿಸಿ ನೆರವು ನೀಡುವುದು ಅತ್ಯಂತ ದೊಡ್ಡ ಮಾನವೀಯ ಸೇವೆಯಾಗಿದೆ. ತರಬೇತಿಯಲ್ಲಿ ಕಲಿತ ಕೌಶಲ್ಯಗಳನ್ನು ಜೀವನದಲ್ಲಿ ನೆನಪಿಟ್ಟು ಕೊಂಡು ಅಗತ್ಯ ಸಂದರ್ಭದಲ್ಲಿ ಬಳಸಿಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಸಹಾಯಕ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಮೋಹನ್ ಕುಮಾರ್ ರವರು ಮಾತನಾಡಿ, ಹೃದಯ ಸ್ತಂಭನ ಹಾಗೂ ಹೃದಯಾಘಾತದಂತಹ ತುರ್ತು ಪರಿಸ್ಥಿತಿಗಳು ಎಲ್ಲೆಡೆ ಸಂಭವಿಸಬಹುದಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ಸಿ.ಪಿ.ಆರ್. ತರಬೇತಿ ಪಡೆದು, ಅಗತ್ಯವಿರುವ ಸಂದರ್ಭದಲ್ಲಿ ಅದನ್ನು ಸಮರ್ಪಕವಾಗಿ ಬಳಸುವ ಮೂಲಕ ಜೀವ ಉಳಿಸುವ ಮಹತ್ವದ ಕಾರ್ಯ ಮಾಡಬಹುದು. ಕಾರ್ಯಕ್ರಮದಲ್ಲಿ ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಮಂಜುನಾಥ್ ಜಿ.ವಿ.ರವರು ಮಾತನಾಡುತ್ತಾ ತುರ್ತು ಸಂದರ್ಭಗಳಲ್ಲಿ ತಕ್ಷಣದ ನೆರವು ದೊರೆಯುವುದು ಜೀವ ಉಳಿಸುವಲ್ಲಿ ನಿರ್ಣಾಯಕವಾಗುತ್ತದೆ. ಆಶಾ ಕಾರ್ಯಕರ್ತೆಯರು ಇಂತಹ ತರಬೇತಿ ಪಡೆಯುತ್ತಿರುವುದು ಶ್ಲಾಘನೀಯ ವಾಗಿದ್ದು, ತಾವು ಕಲಿತ ಕೌಶಲ್ಯವನ್ನು ಅಗತ್ಯವಿರುವವರಿಗೆ ನೆರವಾಗಲು ಬಳಸಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಶ್ರೀದೇವಿ ಸಂಸ್ಥೆಯ ಸ್ಕಿಲ್ ಲ್ಯಾಬ್ ಪ್ರಾಧ್ಯಾಪಕರಾದ ಡಾ. ಯೋಗೀಶ್ ಅವರು ಆಶಾ ಕಾರ್ಯಕರ್ತೆಯರಿಗೆ ಸಿ.ಪಿ.ಆರ್. ಹಾಗೂ ಪ್ರಾಥಮಿಕ ಸ್ಪಂದನೆ ಕುರಿತು ಪ್ರಾಯೋಗಿಕ ತರಬೇತಿ ನೀಡಿದರು. ತರಬೇತಿ ಪಡೆದ ಆಶಾ ಕಾರ್ಯಕರ್ತೆಯರು ತಮ್ಮ ಅನುಭವ ಹಾಗೂ ಅಭಿಪ್ರಾಯಗಳನ್ನು ಹಂಚಿಕೊಂಡರು. ತರಬೇತಿ ಪೂರ್ಣಗೊಳಿಸಿದ ಆಶಾ ಕಾರ್ಯಕರ್ತೆಯರಿಗೆ ಪ್ರಮಾಣಪತ್ರ ವಿತರಿಸಲಾಯಿತು. ಈ ಸಂದರ್ಭದಲ್ಲಿ “ಬದುಕು– ಪ್ರತಿ ಕ್ಷಣವೂ ಅಮೂಲ್ಯ”ಪುಸ್ತಕವನ್ನು ಅತಿಥಿಗಳು ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ಅತಿಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಪಾವಗಡ ತಾಲ್ಲೂಕಿನ ಸುಮಾರು 200 ಕ್ಕೂ ಹೆಚ್ಚು ಆಶಾ ಕಾರ್ಯಕರ್ತೆಯರು, ಶ್ರೀದೇವಿ ಚಾರಿಟಬಲ್ ಟ್ರಸ್ಟಿ ಹಾಗೂ ನೇತ್ರ ತಜ್ಞೆ.ಡಾ.ಲಾವಣ್ಯ ರಮಣ್, ಶ್ರೀದೇವಿ ಆಸ್ಪತ್ರೆಯ ಸಿ.ಎ.ಒ. ಡಾ. ಪ್ರದೀಪ್ ಕುಮಾರ್ ವೇಗಿ, ಡಾ.ರೇಖಾ ಗುರುಮೂರ್ತಿ, ಡಾ.ರಂಗಸ್ವಾಮಿ, ಡಾ. ರಾಮ್ ನಾಯರ್, ಜಿಲ್ಲಾ ಆರೋಗ್ಯಾಧಿಕಾರಿಗಳ ಕಚೇರಿಯ ಲೆಕ್ಕಾಧಿಕಾರಿ ಲಿಂಗಾರೆಡ್ಡಿ, ಜಿಲ್ಲಾ ಆಶಾ ಸಂಯೋಜಕರಾದ ಮಂಜುಳಾ ಹಾಗೂ ಸರಸ್ವತಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಬರಗಾಲ; ರೈತರ ಆಕ್ರೋಶ ಸ್ಫೋಟ; ಎಕರೆಗೆ.30000 ಪರಿಹಾರ 2500 ಪಿಂಚಣಿ ಏರಿಕೆಗೆ ಅಗ್ರಹ

ಸೂರ್ಯಪ್ರಗತಿನ್ಯೂಸ್.ಕಾಂ

ಪಾವಗಡ: ತಾಲೂಕಿನಲ್ಲಿ ಸುಮಾರು 147 ವರ್ಷಗಳ ಹಿಂದೆ ಬಂದಂತಹ ಭೀಕರ ಬರಗಾಲ ಮತ್ತೆ ಆವರಿಸಿದೆ. ಯಾವುದೇ ಕೆರೆಗಳಲ್ಲಿ ನೀರಿಲ್ಲ, ದನ–ಕರಗಳಿಗೆ ಕುಡಿಯಲು ನೀರಿಲ್ಲ, ಸಾವಿರ ಅಡಿ ಬೋರ್ ವೆಲ್ ಕೊರೆಸಿದರೂ ಒಂದು ತೊಟ್ಟು ನೀರು ಬರುತ್ತಿಲ್ಲ. ರೈತರ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿ, ರೈತ ಸಂಘದ ಪದಾಧಿಕಾರಿಗಳು ತಾಲ್ಲೂಕು ದಂಡಾಧಿಕಾರಿಗಳಾದ ರವೀ ಅವರಿಗೆ ಮನವಿ ಪತ್ರ ಸಲ್ಲಿಸಿ ಪ್ರತಿಭಟಿಸಿದರು.



ತುಮಕೂರು ಜಿಲ್ಲಾ ರೈತ ಸಂಘದ ಜಿಲ್ಲಾಧ್ಯಕ್ಷರಾದ ಪೂಜಾರಪ್ಪ, ಪಾವಗಡ ತಾಲ್ಲೂಕು ಅಧ್ಯಕ್ಷರಾದ ಶಿವು ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ಹಲವು ಪ್ರಮುಖ ಬೇಡಿಕೆಗಳನ್ನು ಮುಂದಿಡಲಾಯಿತು.

ಪ್ರಮುಖ ಬೇಡಿಕೆಗಳೇನು?

ಬೆಳೆ ಪರಿಹಾರಕ್ಕೆ ಆಗ್ರಹ: ತಾಲೂಕಿನಲ್ಲಿ ಅಡಿಕೆ, ಎಲೆ (ವೀಳ್ಯದೆಲೆ) ತೋಟಗಳು, ತೆಂಗಿನ ಮರಗಳು ಸಂಪೂರ್ಣವಾಗಿ ಒಣಗಿ ಹೋಗಿವೆ. ಪ್ರತಿ ರೈತನಿಗೆ ಒಂದು ಎಕರೆಗೆ ರೂ. 25,000 ದಿಂದ 30,000 ದವರೆಗೆ ತಕ್ಷಣ ಪರಿಹಾರ ಬಿಡುಗಡೆ ಮಾಡಬೇಕು.

ಕೂಲಿ ಕಾರ್ಮಿಕರ ಸಂಕಷ್ಟ: ಕೃಷಿ ಚಟುವಟಿಕೆ ಸ್ಥಗಿತಗೊಂಡಿರುವುದರಿಂದ ಕೂಲಿ ಕಾರ್ಮಿಕರಿಗೆ ಕೆಲಸವಿಲ್ಲದೆ ವಲಸೆ ಹೋಗುವ ಪರಿಸ್ಥಿತಿ ಬಂದಿದೆ. ಆದ್ದರಿಂದ ವಿ.ಬಿ.ಜಿ. ರಾಮ್–ಜಿ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಕೂಲಿ ಕಾರ್ಮಿಕರು ಹಾಗೂ ಬಡ ಜನರಿಗೆ ಕೂಡಲೇ ಕೆಲಸ ನೀಡಿ, ಪ್ರತಿ ವಾರ ಬಿಲ್ ಬಿಡುಗಡೆ ಮಾಡಬೇಕು.

ಗೋಶಾಲೆ ಆರಂಭಿಸಿ: ಬರಗಾಲದಿಂದ ತತ್ತರಿಸಿರುವ ಪ್ರತಿ ಹೋಬಳಿಯಲ್ಲಿ ದನ–ಕರಗಳಿಗೆ ಮೇವು ಮತ್ತು ನೀರು ಒದಗಿಸಲು ಗೋಶಾಲೆಗಳನ್ನು ತೆರೆಯಬೇಕು.

ಪಿಂಚಣಿ ಸ್ಥಗಿತ ಖಂಡನೆ: ತುಮಕೂರು ಜಿಲ್ಲೆಯ ಎಲ್ಲಾ ಹತ್ತು ತಾಲೂಕುಗಳಲ್ಲಿ ವಯೋವೃದ್ಧರು, ವಿಧವೆಯರು ಮತ್ತು ಅಂಗವಿಕಲರ ಪಿಂಚಣಿಯನ್ನು ನಿಲ್ಲಿಸಲಾಗಿದೆ. ನಿಲ್ಲಿಸಿರುವ ಹಿಂದಿನ ಪಿಂಚಣಿಯನ್ನು ಸಂಪೂರ್ಣವಾಗಿ ಮರುಪಾವತಿ ಮಾಡಬೇಕು. ಅಲ್ಲದೆ, ಈ ಬರಗಾಲದ ಹಿನ್ನೆಲೆಯಲ್ಲಿ ಪಿಂಚಣಿಯನ್ನು ರೂ. 2500ಕ್ಕೆ ಏರಿಸಿ ತಕ್ಷಣ ಬಿಡುಗಡೆ ಮಾಡಬೇಕು. ಅಧಿಕಾರಿಗಳ ನಿರ್ಲಕ್ಷ್ಯದಿಂದ ಅರ್ಧದಷ್ಟು ಜನಕ್ಕೆ ಇನ್ನೂ ಪಿಂಚಣಿ ಮಂಜೂರಾಗಿಲ್ಲ ಎಂದು ರೈತ ಸಂಘ ಆರೋಪಿಸಿದೆ.

ಬಗರ್ ಹುಕುಂ ಜಮೀನು ಮಂಜೂರಾತಿಗೆ ಆಗ್ರಹ: ಕಳೆದ 50 ವರ್ಷಗಳಿಂದ ಫಾರಂ ನಂ. 50, 53 ಮತ್ತು 57 ರಲ್ಲಿ ಸರ್ಕಾರಿ ಜಮೀನು, ಗೋಮಾಳ ಮತ್ತು ಅರಣ್ಯ ಜಮೀನಿನಲ್ಲಿ ಅರ್ಜಿ ಸಲ್ಲಿಸಿರುವ ರೈತರಿಗೆ ತಕ್ಷಣವೇ ಬಗರ್ ಹುಕುಂನಲ್ಲಿ ಜಮೀನು ಮಂಜೂರು ಮಾಡಬೇಕು. ನಿರ್ಗತಿಕ ರೈತರನ್ನು ಒಕ್ಕಲೆಬ್ಬಿಸಬಾರದು.

ಪಾವಗಡ ಕಸಬಾ ಹೋಬಳಿ ನಲಿಗನಹಳ್ಳಿ ಗ್ರಾಮದ ಸರ್ವೆ **ನಂ. 4 ರಲ್ಲಿ 17 ಎಕರೆ 20 ಗುಂಟೆ:** ಸರ್ಕಾರಿ ಜಮೀನಿದ್ದು, ನೂರಾರು ಬಡ ಜನರು ಮನೆಗಳಿಗಾಗಿ ಅರ್ಜಿ ಹಾಕಿದ್ದಾರೆ. ಗ್ರಾಮಸ್ಥರು ಒಪ್ಪಿಕೊಂಡಿದ್ದರೂ ತಾಲೂಕು ಕಂದಾಯ ಆಡಳಿತ ನಿರ್ಲಕ್ಷ್ಯ ತೋರುತ್ತಿದೆ.

ನಾಗಲಮಡಿಕೆ ಹೋಬಳಿ ಕಾಮನದುರ್ಗ ಸರ್ವೆ ನಂಬರ್‌ಗಳಲ್ಲಿ: ಭೂ ಸುಧಾರಣೆ ಕಾಯ್ದೆಯಡಿ ಸುಮಾರು 370 ಎಕರೆ ಜಮೀನು ಇದೆ. ಸರ್ವೆ ನಂ. 78 ರಲ್ಲಿ 4 ಎಕರೆ, 7/2 ರಲ್ಲಿ 60 ಎಕರೆ, 15 ರಲ್ಲಿ 8.23 ಎಕರೆ, 73 ರಲ್ಲಿ 3.31 ಎಕರೆ ಸೇರಿದಂತೆ ಹಲವು ಸರ್ವೆ ನಂಬರ್‌ಗಳಲ್ಲಿ ಜಮೀನು ಸರ್ಕಾರದ ವಶಕ್ಕೆ ಪಡೆಯಲು ದಿನಾಂಕ 22–04–2003 ರಂದೇ ಆದೇಶವಾಗಿದ್ದರೂ (ಪ್ರಕರಣ ಸಂಖ್ಯೆ 264/74–75, 290/74–75, 291/74–75) ಇದುವರೆಗೂ ಅಧಿಕಾರಿಗಳು ವಶಕ್ಕೆ ಪಡೆದಿಲ್ಲ. ಹಾಗೆಯೇ ಜೆ. ರಂಗನಾಥಪುರ ಗ್ರಾಮದ ಸರ್ವೆ ನಂ. 104, 79, 61, 86, 74, 84 ರಲ್ಲಿ 'ಉಳುವವನೇ ಭೂಮಿ ಒಡೆಯ' ಕಾಯ್ದೆ 1975 ರ ಅಡಿ ಬರುವ ಜೋಡಿದಾರರ ಜಮೀನು ಇದ್ದು, ಬ್ರಾಹ್ಮಣರು ವಲಸೆ ಹೋಗಿದ್ದರಿಂದ ಈಗ ಉಳುಮೆ ಮಾಡುತ್ತಿರುವವರಿಗೆ ಮಂಜೂರು ಮಾಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಎಚ್ಚರಿಕೆ: ಈ ಎಲ್ಲಾ ಬೇಡಿಕೆಗಳನ್ನು ತಕ್ಷಣವೇ ಈಡೇರಿಸದಿದ್ದಲ್ಲಿ ತುಮಕೂರು ಜಿಲ್ಲೆ ಹಾಗೂ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಎಲ್ಲಾ ಪ್ರಗತಿಪರ ಸಂಘಟನೆಗಳೊಂದಿಗೆ ಸೇರಿ ನಿರಂತರ ಹೋರಾಟ ಹಮ್ಮಿಕೊಳ್ಳಲಾಗುವುದು ಹಾಗೂ ಮುಖ್ಯಮಂತ್ರಿಗಳನ್ನು ಖುದ್ದು ಭೇಟಿ ಮಾಡಿ ಮುತ್ತಿಗೆ ಹಾಕಲಾಗುವುದು ಎಂದು ಜಿಲ್ಲಾಧ್ಯಕ್ಷ ಪೂಜಾರಪ್ಪ ಎಚ್ಚರಿಕೆ ನೀಡಿದ್ದಾರೆ.

ತಾಲೂಕು ಅಧ್ಯಕ್ಷ ಶಿವು ಮಾತನಾಡಿ ತಾಲೂಕ್ ಕಚೇರಿಯಲ್ಲಿ ಪೈಸಾ ನೆ ಪರಮಾತ್ಮ ಅನ್ನೋ ರೀತಿಯಲ್ಲಿ ಅಧಿಕಾರಿಗಳು ವರ್ತನೆ ಮಾಡುತ್ತಾರೆ ರೆವಿನ್ಯೂ ಕಚೇರಿಗಳಲ್ಲಿ ಲಂಚದಿಂದನೆ ಕೆಲಸ ಆಗೋದು ಅನ್ನೋ ಪರಿಸ್ಥಿತಿ ಉದ್ಭವ ಆಗಿದೆ ಎಂದು ಆರೋಪಿಸಿದರು

ಈ ಸಂದರ್ಭದಲ್ಲಿ ರೈತ ಸಂಘದ ಸದಸ್ಯರುಗಳಾದ ಗೋಪಾಲ್, ತಿಮ್ಮೇನಾಯ್ಕ, ಲಚ್ಚೇನಾಯ್ಕ, ಭೀಮದು, ನರಸಿಂಹಪ್ಪ, ಗೋವಿಂದಪ್ಪ, ಲಾಲುಸ್ವಾಮಿ, ಸಂಜೀವಪ್ಪ, ಅಶೋಕಪ್ಪ, ಹನುಮಂತರಾಯಪ್ಪ ಮತ್ತಿತರರು ಪಾಲ್ಗೊಂಡಿದ್ದರು.

ಬೆಳೆಕಟಾವು ಪ್ರಯೋಗಗಳನ್ನು ಶೇ.100 ರಷ್ಟು ಪೂರ್ಣಗೊಳಿಸಿ, ಇಳುವರಿ ಮಾಹಿತಿ ನಿಖರವಾಗಿ ನಮೂದಿಸಲು ಡಿಸಿ ಸೂಚನೆ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಜಿಲ್ಲೆಯಲ್ಲಿ ಬೆಳೆ ಕಟಾವು ಪ್ರಯೋಗಗಳನ್ನು ಶೇ.100ರಷ್ಟು ಪೂರ್ಣಗೊಳಿಸಿ ಇಳುವರಿ ಮಾಹಿತಿಯನ್ನು ನಿಖರವಾಗಿ ನಮೂದಿಸಬೇಕೆಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅಧಿಕಾರಿಗಳಿಗೆ ಸೂಚನೆ ನೀಡಿದರು.





ತಮ್ಮ ಕಚೇರಿಯಲ್ಲಿಂದು ನಾಗರಿಕ ನೋಂದಣಿ ಪದ್ಧತಿಯಡಿ ಜನನ–ಮರಣ ನೋಂದಣಿಯನ್ನು ಸುವ್ಯವಸ್ಥಿತವಾಗಿ ನಡೆಸುವ ಹಿನ್ನೆಲೆಯಲ್ಲಿ ಗೂಗಲ್ ಮೀಟ್ ಮೂಲಕ ಬುಧವಾರ ಜರುಗಿದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬೀಮಾ(ವಿಮಾ) ಯೋಜನೆಯಡಿ 2026–27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ತುಮಕೂರು ಜಿಲ್ಲೆಗೆ 5120 ಬೆಳೆಕಟಾವು ಪ್ರಯೋಗಗಳು ಹಂಚಿಕೆಯಾಗಿದೆ. ಜಿಲ್ಲೆಯು ಬರಗಾಲ ಪೀಡಿತವೆಂದು ಘೋಷಿತವಾಗಿರುವುದರಿಂದ ಬೆಳೆಕಟಾವು ವೇಳೆ ಸಂಬಂಧಿಸಿದ ಅಧಿಕಾರಿಗಳು, ರೈತರು, ವಿಮಾಪ್ರತಿನಿಧಿಗಳು ಹಾಗೂ ಮೇಲ್ವಿಚಾರಕರ ಸಮ್ಮುಖದಲ್ಲಿ ನಿಯಮಾನುಸಾರ ಹಂಚಿಕೆಯಾದ ಎಲ್ಲಾ ಬೆಳೆಕಟಾವು ಪ್ರಯೋಗಗಳನ್ನು ಕೈಗೊಂಡು ನಿಖರವಾಗಿ ಇಳುವರಿ ಮಾಹಿತಿಯನ್ನು ಯಾವುದೇ ತಪ್ಪುಗಳಿಗೆ ಅವಕಾಶವಿಲ್ಲದಂತೆ ಮೊಬೈಲ್ ಆ್ಯಪ್‌ನಲ್ಲಿ ನಮೂದಿಸಬೇಕೆಂದು ಬೆಳೆಕಟಾವು ಪ್ರಯೋಗಗಳನ್ನು ಕೈಗೊಳ್ಳುವ ಎಲ್ಲಾ ಮೂಲ ಕಾರ್ಯಕರ್ತರುಗಳಾದ ಕಂದಾಯ ಇಲಾಖೆಯ ಗ್ರಾಮ ಆಡಳಿತ ಅಧಿಕಾರಿಗಳು, ಖಆಕಖ ಇಲಾಖೆಯ ಪಿ.ಡಿ.ಒ./ಕಾರ್ಯದರ್ಶಿಗಳು, ಕೃಷಿ ಇಲಾಖೆಯ ಕೃಷಿ ಅಧಿಕಾರಿಗಳು ಮತ್ತು ಸಹಾಯಕ ಕೃಷಿ ಅಧಿಕಾರಿಗಳು, ತೋಟಗಾರಿಕೆ ಇಲಾಖೆಯ ಸಹಾಯಕ ತೋಟಗಾರಿಕೆ ಅಧಿಕಾರಿಗಳಿಗೆ ಅವರು ನಿರ್ದೇಶನ ನೀಡಿದರು.

ಬೆಳೆಕಟಾವು ಪ್ರಯೋಗಗಳನ್ನು ಕೈಗೊಳ್ಳುವ ಮೂಲಕಾರ್ಯಕರ್ತರುಗಳನ್ನು ಸಬಂಧ ಪಟ್ಟ ಇಲಾಖೆಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಮೇಲ್ವಿಚಾರಣೆ ಮಾಡಿ ವರದಿ ಮಾಡಬೇಕು. ತಪ್ಪಿದಲ್ಲಿ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ(ವಿಮಾ) ಯೋಜನೆಯಡಿ ಕೈಗೊಳ್ಳುವ ಬೆಳೆ ಕಟಾವು ಪ್ರಯೋಗಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕೃಷಿ ಅಂಕಿ ಅಂಶಗಳು ಮತ್ತು ನಾಗರೀಕ ನೋಂದಣಿ ಪದ್ಧತಿಯನ್ನು ಉತ್ತಮ ಪಡಿಸುವ ಸಲುವಾಗಿ ಜಿಲ್ಲೆಯಲ್ಲಿ ಘಟಿಸುವ ಎಲ್ಲಾ ಜನನ–ಮರಣ ಘಟನೆಗಳನ್ನು 21 ದಿನದೊಳಗೆ ನೋಂದಾಯಿಸಿ ಜನನ ಪ್ರಮಾಣ ಪತ್ರಗಳನ್ನು ವಿತರಿಸುವಂತೆ ಸೂಚಿಸಿದರು.

ಜಿಲ್ಲೆಯಲ್ಲಿ 330 ಗ್ರಾಮ ಪಂಚಾಯ್ತಿ, 11 ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಆಸ್ಪತ್ರೆಗಳು ಸೇರಿದಂತೆ ಎಲ್ಲಾ ಗ್ರಾಮ ಆಡಳಿತ ಅಧಿಕಾರಿಗಳು ಜನನ–ಮರಣ ಘಟನೆಗಳನ್ನು ನೋಂದಾಯಿಸುತ್ತಿದ್ದು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಘಟಿಸುವ ಜನನಗಳಿಗೆ ಸಂಬಂಧಿಸಿದಂತೆ ಆಸ್ಪತ್ರೆಯಿಂದ ತಾಯಿ ಬಿಡುಗಡೆ ಯಾಗುವಾಗಲೇ ಜನನ ಪ್ರಮಾಣ ಪತ್ರಗಳನ್ನು ವಿತರಿಸಲು ಅಗತ್ಯ ಕ್ರಮವಹಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಡಿ.ರಂಗಸ್ವಾಮಿ. ಜಂಟಿ ಕೃಷಿ ನಿರ್ದೇಶರು, ಜಂಟಿ ತೋಟಗಾರಿಕೆ ನಿರ್ದೇಶಕರು ಸೇರಿದಂತೆ ಇತರೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು, ಮತ್ತಿತರರು ಹಾಜರಿದ್ದರು.

ಅಧ್ಯಾಪಕರು ಮಕ್ಕಳಿಗೆ ಉತ್ತಮವಾದಂತಹ ಜೀವನ ಸೃಷ್ಟಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ

ಮಧುಗಿರಿ: ತಂದೆ–ತಾಯಿ ಜೀವ ನೀಡುವವರಾದರೆ ಅಧ್ಯಾಪಕರು ಮಕ್ಕಳಿಗೆ ಉತ್ತಮವಾದಂತಹ ಜೀವನ ಸೃಷ್ಟಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಎಂದು ಮಾಜಿ ಸಹಕಾರ ಸಚಿವರು ಹಾಗೂ ಶಾಸಕರಾದ ಕೆ.ಎನ್ ರಾಜಣ್ಣ ಅಭಿಪ್ರಾಯ ಪಟ್ಟರು. ಪಟ್ಟಣದ ಪುರಸಭೆಯ ಸಮೀಪವಿರುವ ಎಂ.ಜಿ.ಎಂ ಬಾಲಿಕಾ ಪ್ರೌಢಶಾಲೆಯ ಮಾಲಿ ಮರಿಯಪ್ಪ ಸಭಾಂಗಣಾದಲ್ಲಿ ಅಚಲ ಕಲ್ಚರಲ್ ಫೌಂಡೇಶನ್ ವತಿಯಿಂದ ಶಿಕ್ಷಕರ ನೇಮಕಾತಿ ಪರೀಕ್ಷೆಗೆ ನಡೆದ ಉಚಿತ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದೂ ಪ್ರತಿಯೊಂದು ಹುದ್ದೆಗಳಲ್ಲೂ ಸ್ಪರ್ಧೆಗಳು ಏರ್ಪಟ್ಟಿವೆ.ಸ್ಪರ್ಧಾರ್ಥಿಗಳು ಕಠಿಣ ಪರಿಶ್ರಮದ ಮೂಲಕ ಅಭ್ಯಾಸ ನಡೆಸಿದರೆ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳನ್ನು ಗಳಿಸಬಹುದು ಜೊತೆಯಲ್ಲಿ ಹೆಚ್ಚು ಅಂಕ ಗಳೊಂದಿಗೆ ಒಂದಲ್ಲಾ ಮತ್ತೊಂದು ಹುದ್ದೆಗಳು ನಿಮ್ಮನ್ನು ಹರಿಸಿ ಬರುತ್ತವೆ. ಇಂದಿನ ದಿನಗಳಲ್ಲಿ ಬಡ ಜನರು ಸಹ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವಂತಹ ಹಂಬಲವನ್ನು ಹೊಂದುವ ಮೂಲಕ.ತಮ್ಮ ಮಕ್ಕಳಿಗೆ ಉತ್ತಮವಾದ ಶಿಕ್ಷಣವನ್ನು ದೊರಕಿಸಿ ಕೊಡುತ್ತಿದ್ದಾರೆ. ನಮ್ಮ ಸರ್ಕಾರವು ಸಹ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದೆ.2018ರ ಸಾಲಿನಲ್ಲಿ ಏಕಶಿಲಾ ಬೆಟ್ಟವನ್ನು ಏರುವ ಸಂಧರ್ಭದಲ್ಲಿ ಬಾಲಕನೊಬ್ಬ ಶಾಲೆಯನ್ನು ತೊರೆದು ಬೆಟ್ಟದಲ್ಲಿ ಐಸ್ ಕ್ರೀಂ ಮಾರಾಟ ಮಾಡುತ್ತಿದ್ದ ಆತನನ್ನು ಕರೆದು ವಿಚಾರಿಸಿದಾಗ ಪುಸ್ತಕಗಳನ್ನು ಖರೀದಿ ಮಾಡಲು ನಾನು ಐಸ್ ಕ್ರೀಂ ಮಾರಾಟದಲ್ಲಿ ತೊಡಗಿದ್ದೇನೆಂದಾಗ ಆ ಬಾಲಕನಪ್ರೇರಣೆಯಿಂದಾಗಿ ತಾಲೂಕಿನ ಶಾಲೆಗಳ ವಿದ್ಯಾರ್ಥಿಗಳಿಗೆ ಉಚಿತವಾಗಿ 12 ನೋಟ್ ಪುಸ್ತಕಗಳನ್ನು ವಿತರಿಸುವ ಯೋಜನೆಯನ್ನು ಆರಂಭಿಸಿದ್ದು ಇಂದಿಗೂ ಸಹ ನೋಟ್ ಪುಸ್ತಕಗಳನ್ನು ತಾಲೂಕಿನಾದ್ಯಂತಹ ವಿತರಿಸಲಾಗುತ್ತಿದೆ. ಮತ್ತೊಬ್ಬ ವಿದ್ಯಾರ್ಥಿ ನಮ್ಮ ಮನೆಯಲ್ಲಿ ಓದಲು ಬರೆಯಲು ಬೆಳಕಿನ ಅಭಾವವೆಂದು ಪತ್ರ ಬರೆದಾಗ ತಾಲೂಕಿನ ಪ್ರತಿ ವಿದ್ಯಾರ್ಥಿಗಳ ಮನೆಗೆ ಬೆಳಕನ್ನು ನೀಡಲು ನಿರ್ಧರಿಸಿ ವಿದ್ಯಾರ್ಥಿ ಜ್ಯೋತಿಯೋಜನೆ ಆರಂಭಿಸಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಮಿಡಿಗೇಶಿ ಗ್ರಾಮದಲ್ಲಿ ಆಯೋಜಿಸಲಾಗಿದ್ದ ವಿವಿಧ ಕಾಮಗಾರಿಗಳ ಗುದ್ದಲಿ ಪೂಜಾ ಕಾರ್ಯಕ್ರಮದಲ್ಲಿ ರಾಜ್ಯದ ಶಾಲಾ ಮಕ್ಕಳಿಗೆ ಜಾರಿ ಮಾಡಿದ ಉಚಿತ ಷೂ ಭಾಗ್ಯ ಯೋಜನೆಯಿಂದಾಗಿ ಇಡೀ ರಾಜ್ಯದ ಶಾಲಾ ಮಕ್ಕಳಿಗೆ ಅನುಕೂಲವಾಯಿತು. ಹುದ್ದೆಗಳಿಗಾಗಿ ನಡೆಯುವಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಧೈರ್ಯದಿಂದ ಎದುರಿಸಲು ಅವಶ್ಯವಿರುವ ಎಲ್ಲ ಸಹಕಾರವನ್ನು ನೀಡಲಾಗುವುದು, ಅಚಲ ಫೌಂಡೇಶನ್ ಪದಾಧಿಕಾರಿಗಳು ಉತ್ತಮವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ.ಮುಂದಿನ ದಿನಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಭೋಧಿಸಲು ಬರುವಂತಹ ಭೋದಕರಿಗೆ ಹಾಗೂ ಮಾರ್ಗದರ್ಶ ಕರುಗಳಿಗೆ ಆರ್ಥಿಕ ಸಹಕಾರ ನೀಡಲಾಗುವುದು.ಪರೀಕ್ಷಾರ್ಥಿಗಳು ಪಠ್ಯದ ಜೊತೆಗೆ ದಿನ ಪತ್ರಿಕೆಗಳನ್ನು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು ಪತ್ರಿಕೆಗಳಲ್ಲಿ ಪ್ರಕಟವಾಗುವಂತಹ ಬರಹ,ಲೇಖನಗಳ ಬಗ್ಗೆ ಗಮನಹರಿಸಿದರೆ ನಿಮ್ಮ ಜ್ಞಾನ ಬಂಡಾರವು ವೃದ್ಧಿಯಾಗುತ್ತದೆ ಎಂದರು. ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಸಮಯದಲ್ಲಿ ಯಾವುದೇ ದುಶ್ಚಟಗಳಿಗೆ ಬಲಿಯಾಗಬಾರದು ಹಾಗೂ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗದಂತೆ ಎಚ್ಚರ ವಹಿಸಬೇಕು ಇಲ್ಲವಾದರೆ ನಿಮ್ಮ ಮುಂದಿನ ಭವಿಷ್ಯವೇ ಆಳಾಗುತ್ತದೆ ಎಂದು ಕಿವಿ ಮಾತು ಹೇಳಿದರು. ಅಚಲ ಕಲ್ಚರಲ್ ಫೌಂಡೇಶನ್ ಅಧ್ಯಕ್ಷರಾದ ನಿ.ಪ್ರೊ.ಮುನೀಂದ್ರ ಕುಮಾರ್ ಡಿ.ಎಸ್ ಮಾತನಾಡಿ ನಮ್ಮ ಫೌಂಡೇಶನ್ ವತಿಯಿಂದ ಸಮಾಜಕ್ಕೆ ಅಗತ್ಯವಿರುವ ಚಿಕ್ಕ ಸೇವೆಯೊಂದನ್ನು ಮಾಡಲಾಗುತ್ತಿದೆ ಯಾವುದೇ ರೀತಿಯ ಶುಲ್ಕಗಳನ್ನು ಪಡೆಯದೆ ಉಚಿತವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸ ಲಾಗಿದೆ. ಗ್ರಾಮೀಣ ಭಾಗದ ಮಕ್ಕಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಯಾವ ರೀತಿ ಸನ್ನದ್ಧರಾಗ ಬೇಕೆಂಬುದರ ಬಗ್ಗೆ ಮಾರ್ಗದರ್ಶನ,ಸಮಯ ನಿರ್ವಹಣೆ,ಆತ್ಮ ವಿಶ್ವಾಸ, ಬದ್ಧತೆಯ ಬಗ್ಗೆ ಕಲಿಸಿಕೊಡ ಲಾಗಿದೆ.ಸೇವೆಯನ್ನು ಮಾಡ ಬೇಕೆಂಬ ಹಂಬಲವನ್ನು ಹೊಂದಿರುವವರು ಇಲ್ಲಿ ಶಾಶ್ವತವಾಗಿ ಉಳಿಯುವವರಲ್ಲ,ಹಲವಾರು ವರ್ಷ ನೆರಳು ನೀಡಿದ ಮರ ತೊಲೆಯಾಗಿ ಬಿದ್ದಿರುತ್ತದೆ ಹಲವಾರು ವರ್ಷ ರಾಜ್ಯವನ್ನು ಆಳಿದ ಅರಸ ಮೂರು ದಿನಗಳ ವರೆಗೆ ಹೆಣವಾಗಿ ಬದುಕಲು ಸಾಧ್ಯವಿಲ್ಲ ಆದರೆ ಮನುಷ್ಯನು ಸಾರ್ಥಕ ಬದುಕನ್ನು ಕಟ್ಟಿಕೊಳ್ಳಬೇಕು ನಾವು ಮಾಡಿರುವ ಸೇವೆಗಳು ಮಾತ್ರ ಉಳಿಯುತ್ತದೆ ಎಂಬ ನಿಟ್ಟಿನಲ್ಲಿ ಅಚಲ ಕಲ್ಚರಲ್ ಫೌಂಡೇಷನ್ ಪದಾಧಿಕಾರಿಗಳು ಈ ಕಾರ್ಯದಲ್ಲಿ ತೊಡಗಿಸಿ ಕೊಂಡಿದ್ದಾರೆ ಎಂದರು. ಇದೇ ಸಂಧರ್ಭದಲ್ಲಿ ಉಚಿತವಾಗಿ ತರಬೇತಿ ನೀಡಿದ 12 ಜನ ಸಂಪನ್ಮೂಲ ವ್ಯಕ್ತಿಗಳನ್ನು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಯ ಪುಸ್ತಕ ದಾನಿ ಡಾ.ಗರಣಿ ಕೃಷ್ಣ ಮೂರ್ತಿ ಮತ್ತುಪಿ ಎಚ್ ಡಿ ಪದವಿ ಪುರಸ್ಕೃತ ಡಾ.ರಂಗಾಸ್ವಾಮಯ್ಯ ರವರುಗಳನ್ನು ಗೌರವಿಸಲಾಯಿತು.



ಸಾಹಿತಿ ಮಲನ ಮೂರ್ತಿ,ಕೆ.ಎನ್ ಹನುಮಂತರಾಯಪ್ಪ, ಡಿ ವೈ ಎಸ್ ಪಿ ಮಂಜುನಾಥ್, ಪುರವರ ಸಾಹಿತ್ಯ ಪರಿಷತ್ ಅಧ್ಯಕ್ಷ ಪಿ.ಕೆ.ರಂಗಸ್ವಾಮಿ,ನಿ.ಪ್ರಾಂಶುಪಾಲ ಪ್ರೊ ಕೃಷ್ಣ ಪ್ರಸರ್ವಜ್ಞ ವೇದಿಕೆಯ ತಾಲೂಕು ಅಧ್ಯಕ್ಷರಾದ ವೆಂಕಟರವಣಪ್ಪ,ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಎಸ್.ವಿ.ರಮೇಶ್,ಪುರಸಭೆಯ ಮಾಜಿ ಅಧ್ಯಕ್ಷ ಎಂ.ಕೆ.ನಂಜುಂಡಯ್ಯ,ಮುಖಂಡರುಗಳಾದ ಎಂ.ಎಸ್ ಮಲ್ಲಿಕಾರ್ಜುನಯ್ಯ, ಹರ್ಷ ಆರ್. ಕುರುಬರಹಳ್ಳಿ ಮೂಡ್ಲಗಿರೀಶ್,ಉಪನ್ಯಾಸಕರಾಮಚಂದ್ರಪ್ಪ,ಟಿ.ಪ್ರಸನ್ನ ಕುಮಾರ್,ವೀಣಾ ಶ್ರೀನಿವಾಸ್ ಹಾಗೂ ಸ್ಪರ್ಧಾರ್ಥಿಗಳು ಇದ್ದರು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. GMAIL: suryapragathi2021@gmail.com.